ಅಂತುಳೆ ಅಪರಾಧಿ

ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ಅಂತುಳೆಯವರ ಮೇಲೆ ಶ್ರೀಮತಿ ಮೃಣಾಲಿನಿಗೋರೆ ಮತ್ತಿತರರು ಮಹಾರಾಷ್ಟ್ರ ಹೈಕೋರ್ಟಿನಲ್ಲಿ ಸಿಮೆಂಟ್ ಹಗರಣದ ಬಗ್ಗೆ ಹಾಕಿದ ಮೊಕದ್ದಮೆಯ ತೀರ್ಪು ನಿನ್ನೆ ಬಂದು ಅದರಲ್ಲಿ ಅಂತುಳೆಯವರು ಅಪರಾಧ ಮಾಡಿರುತ್ತಾರೆಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಕೆಲವು ತಿಂಗಳ ಹಿಂದೆ ಈ ಆರೋಪಗಳು ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಾಗ ಮತ್ತು ಮಹಾರಾಷ್ಟ್ರ ಶಾಸನ ಸಭೆಯಲ್ಲೂ, ಲೋಕಸಭೆಯಲ್ಲೂ ವಿರೋಧ ಪಕ್ಷಗಳ ಸದಸ್ಯರು ಈ ಆರೋಪಗಳ ವಿಚಾರಣೆಯಾಗಬೇಕೆಂದು ಒತ್ತಾಯಪಡಿಸಿದಾಗ ಅಂತುಳೆಯವರು ತಮ್ಮ ರಾಜೀನಾಮೆ ಪತ್ರವನ್ನು ಇಂದಿರಾಗಾಂಧಿಯವರಿಗೆ ಕೊಟ್ಟು ಜನತೆಯ ವಿರೋಧವನ್ನು ಶಮನಮಾಡಲು ಪ್ರಯತ್ನಿಸಿದರು. ಕೆಲವರು ಕೋರ್ಟಿನಲ್ಲೂ ಈ ಅಂಶಗಳ ಬಗ್ಗೆ ಖಟ್ಲೆ ಹೂಡಿದ್ದರಿಂದ ಕೋರ್ಟಿನಲ್ಲಿ ಆರೋಪಗಳು ರುಜುವಾತಾದಲ್ಲಿ ಅವರು ರಾಜೀನಾಮೆ ಕೊಡುವರೆಂದು ಶ್ರೀಮತಿ ಇಂದಿರಾಗಾಂಧಿಯವರು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರು. ಈಗ ತೀರ್ಮಾನ ಬಂದಿದೆ. ಸರಕಾರದ ನಿಯಮಗಳನ್ನು ಮುಖ್ಯಮಂತ್ರಿಯವರು ಉಲ್ಲಂಘಿಸಿದ್ದಾರೆಂದಾಗಿದೆ. ಇಂದಿರಾ ಪ್ರತಿಷ್ಠಾನದ ಟ್ರಸ್ಟ್‌ಗೆ ನಿಧಿ ಕೂಡಿಸಲು ಅಧಿಕಾರದ ದುರುಪಯೋಗವಾಗಿದೆಂದು ಸಾರಲಾಗಿದೆ.

ಸಂಪಾದಕೀಯ

ಇದೊಂದು ಮಹತ್ವದ ತೀರ್ಮಾನವಾಗಿದೆ. ಈಗ ಅಂತುಳೆಯವರ ರಾಜೀನಾಮೆ ಅನಿವಾರ್ಯವಾಗಿದೆ. ಕಾಂಗ್ರೆಯ ಅಧಃಪತನವನ್ನು ಇದು ಸ್ಪಷ್ಟಪಡಿಸುತ್ತದೆ. ಭ್ರಷ್ಟಾಚಾರ ಆಡಳಿತೆಯಲ್ಲಿ ತುಂಬಿತುಳುಕಾಡುತ್ತಿದೆ. ಕೇಂದ್ರದಲ್ಲೂ ಇತರ ಕಾಂಗ್ರೆ ರಾಜ್ಯಗಳಲ್ಲೂ ಇದು ತಾಂಡವವಾಡುತ್ತಿರುವುದನ್ನು ಕಾಣಬಹುದು. ಪ್ರಧಾನ ಮಂತ್ರಿಯವರು ಈಗಲಾದರೂ ಕಣ್ತೆರೆದು ಇದನ್ನೆದುರಿಸಲು ಕ್ರಮ ತೆಗೆದುಕೊಳ್ಳುವುದಗತ್ಯ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾದ್‌ರವರು ಹೇಳಿರುವಂತೆ ಪ್ರಧಾನ ಮಂತ್ರಿಯವರು ಇನ್ನಾದರೂ 'ಭ್ರಷ್ಟಾಚಾರವನ್ನು' ತಡೆಗಟ್ಟಲು ಕ್ರಮ ತೆಗೆದುಕೊಳ್ಳದಿದ್ದರೆ ಅದು ಭೂತಾಕಾರವಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲವೆಂದಿದ್ದಾರೆ.

ಮುಂಬಯಿ ಹೈಕೋರ್ಟಿನ ತೀರ್ಮಾನ ಜನತೆಗೆ ದೊರೆತ ಜಯ. ಈ ತೀರ್ಮಾನ ನ್ಯಾಯಾಲಯಕ್ಕೆ ಹೆಮ್ಮೆ ತಂದಿದೆ. ಆಡಳಿತೆಯ ದುರುಪಯೋಗಕ್ಕೆ ಬರೆ ಎಳೆದಂತಾಗಿದೆ. ಇನ್ನಾದರೂ ಕಾಂಗ್ರೆ ಆಡಳಿತಗಾರರೂ ಎಚ್ಚರಿಕೆ ವಹಿಸಲಿ. ಇದರಿಂದ ಭ್ರಷ್ಟಾಚಾರವು ಎಳ್ಳಷ್ಟಾದರೂ ಕಡಿಮೆಯಾದರೆ ದೇಶಕ್ಕೆ ಹಿತ. ಜನತೆಯ ಎಚ್ಚರಿಕೆ ದ್ವಿಗುಣಗೊಳ್ಳಲಿ.


ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 4 | ಸಂಚಿಕೆ 3 | ಜನವರಿ 17, 1982 | ಬೆಲೆ : 60 ಪೈಸೆ

ಶ್ರೀಸಾಮಾನ್ಯನಿಗೋಸ್ಕರ ಅವಿರತ ಶ್ರಮಿಸಿದ

ಕಾಂ. ಜ್ಯೋತಿರ್ಮಯಿಬಸು ನಿಧನ



ಜನತೆಯ ಸಮಸ್ಯೆಗಳ ಪರಿಹಾರಕ್ಕೆ ನಿರ್ಭೀತಿಯಿಂದ ಹೋರಾಡುತ್ತಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕ ಮತ್ತು ಸಂಸತ್ ಸದಸ್ಯ ಕಾಂ. ಜ್ಯೋತಿರ್ಮಯಿ ಬಸು ಅವರು 12-1-82ರಂದು ಜೈಪುರದಲ್ಲಿ ಹೃದಯಾಘಾತದಿಂದ ನಿಧನರಾದ ಆಘಾತಕರ ವಾರ್ತೆ ಬಂದಿದೆ.

ರೇಲ್ವೆ ಸಲಹಾ ಸಮಿತಿಯ ಸಭೆಯಲ್ಲಿ ಪಾಲ್ಗೊಳ್ಳಲೆಂದು ಕಾಂ. ಜ್ಯೋತಿರ್ಮಯಿ ಬಸು ಜೈಪುರಕ್ಕೆ ತೆರಳಿದ್ದರು.

ಜನತೆ ಮತ್ತು ಜನತಂತ್ರಕ್ಕಾಗಿ ಸಂಸತ್ತಿನ ಒಳಗೆ ಮತ್ತು ಹೊರಗೆ ಸತತ ಹೋರಾಟ ನಡೆಸಿದ್ದ ಕಾಂ. ಜ್ಯೋತಿರ್ಮಯಿ ಬಸುರ ನಿಧನಕ್ಕೆ ಪಕ್ಷಕ್ಕೆ ದೊಡ್ಡ ತುಂಬಲಾರದ ನಷ್ಟವಾಗಿದೆ.

ಸಾರ್ವಜನಿಕ ಲೆಕ್ಕಪತ್ರ ಪರಿಶೀಲನಾ ಸಮಿತಿ ಹಾಗೂ ಸರಕಾರಿ

(ಕಡೇ ಪುಟ ನೋಡಿ)

ಜನವರಿ 19ರಂದು ನಡೆಯಲಿರುವ

ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧರಾಗಿ

1981 ಡಿಸೆಂಬರ್ 24ರಂದು ದೆಹಲಿಯಲ್ಲಿ ರಾಷ್ಟ್ರೀಯ ಆಂದೋಲನ ಸಮಿತಿಯ ಸಭೆ ಸೇರಿ, ನವೆಂಬರ್ 23ರಂದು ಸಂಸತ್ ಭವನದೆದುರು ನಡೆದ ಬೃಹತ್ ಪ್ರದರ್ಶನದಿಂದು ತೆಗೆದುಕೊಂಡ ತೀರ್ಮಾನದ ಪ್ರಗತಿಯನ್ನು ಅವಲೋಕಿಸಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಸಮರ ಮುಖರ್ಜಿ (ಎಂ ಪಿ) ವಹಿಸಿದ್ದರು.

ಜನವರಿ 19ರಂದು ರಾಷ್ಟ್ರದಾದ್ಯಂತ ಒಂದು ದಿನ ಸಾರ್ವತ್ರಿಕ ಮುಷ್ಕರ ನಡೆಸಬೇಕೆಂಬ ಕರೆಗೆ ದೇಶದಾದ್ಯಂತ ಭಾರೀ ಬೆಂಬಲ ದೊರೆತುದಕ್ಕೆ ಸಭೆ ತೃಪ್ತಿ ವ್ಯಕ್ತಪಡಿಸಿತು. ರಾಷ್ಟ್ರೀಯ ಆಂದೋಲನ ಸಮಿತಿಯ ಘಟಕಗಳು ಮುಷ್ಕರದ ಭಾರೀ ಯಶಸ್ಸಿಗೆ ಅವಿರತ ಯತ್ನ, ಪ್ರಚಾರ, ಪ್ರಕ್ಷೋಭೆ ನಡೆಸಿವೆ. ಜನವರಿ 19ರಂದು ನಡೆಯಲಿರುವ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗುವುದೆಂದು ಎನ್.ಸಿ.ಸಿ. ಸಭೆ ಭರವಸೆ ವ್ಯಕ್ತಪಡಿಸಿತು.

ಸ್ಥಳೀಯ ಮಟ್ಟದಲ್ಲೂ ಜಂಟಿಯಾಗಿ ಕಾರ್ಯಕ್ರಮ, ರೂಪಿಸಿ ಮುಷ್ಕರದ ತೀರ್ಮಾನವನ್ನು ಕಾರ್ಯಗತಗೊಳಿಸುವಲ್ಲಿ ಅವಿರತ ಶ್ರಮಿಸಬೇಕೆಂದು ಎನ್ ಸಿ ಸಿ. ಕರೆ ನೀಡಿದೆ.

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಯೋಜಿತ 'ಭಾರತ ಬಂದ್'ನ್ನು ವಿಫಲಗೊಳಿಸುವಂತೆ ಕರೆ ನೀಡಿರುವುದನ್ನು ಎನ್.ಸಿ.ಸಿ. ಸಭೆ ತೀವ್ರವಾಗಿ ಖಂಡಿಸಿದೆ. ಜನವರಿ 19ರಂದು ಕೈಗಾರಿಕಾ ಮುಷ್ಕರ ಮಾತ್ರ ನಡೆಯಲಿದೆ. ಶ್ರೀಮತಿ ಗಾಂಧಿ ತನ್ನ ಹೇಳಿಕೆಯಲ್ಲಿ ಮುಷ್ಕರವನ್ನು ಎದುರಿಸುವಂತೆ ತನ್ನ ಪಕ್ಷದ ಕಾರ್ಯಕರ್ತರನ್ನು ಪ್ರಚೋದಿಸಿದ್ದಾರೆ ಅಲ್ಲದೆ ಕಾಂಗ್ರೆ ನೇತೃತ್ವದ ಆಡಳಿತಗಳಿರುವ ರಾಜ್ಯಗಳಲ್ಲಿ ಮುಷ್ಕರವನ್ನು ಸದೆಬಡೆಯಲು 'ಹಸಿರು ದೀಪ'(Green Signal) ತೋರಿಸಿದ್ದಾರೆ.

ಸ್ವತಂತ್ರ್ಯ ನಂತರ ಭಾರೀ ಪ್ರಮಾಣದಲ್ಲಿ ಭಾರತದ ಕಾರ್ಮಿಕವರ್ಗ ಜಂಟೀ ಕಾರ್ಯಾಚರಣೆಗೆ ಇಳಿದಿರುವುದು ಪ್ರಧಾನಿಗೆ ಇರುಸುಮುರುಸಾಗಿದೆ; ಕೆರಳಿಸಿದೆ. ಜ. 19ರ ಮುಷ್ಕರವನ್ನು ಯಶಸ್ವಿಮಾಡಿ ಪ್ರಧಾನಿಗೆ ಭಾರತದ ಕಾರ್ಮಿಕವರ್ಗ ಸೂಕ್ತ ಉತ್ತರ ನೀಡುವುದೆಂದು ಎನ್.ಸಿ.ಸಿ. ಅಭಿಪ್ರಾಯಪಟ್ಟಿದೆ.

ಅಸಂಬದ್ಧ ಪ್ರಲಾಪ

ಜ. 19ರಂದು ನಡೆಯಲಿರುವ ಮುಷ್ಕರದ ಪರಿಣಾಮವಾಗಿ ರಾಷ್ಟ್ರದ ಉತ್ಪಾದನೆಗೆ ಭಾರೀ ಹೊಡೆತ ಬೀಳುವದೆಂದೂ, ಮುಷ್ಕರಕ್ಕೆ ಕರೆ ನೀಡಿರುವುದು ರಾಷ್ಟ್ರದ್ರೋಹಿ ಕೃತ್ಯವೆಂತಲೂ ಆಳುವ ಪಕ್ಷದವರು ಪ್ರಲಾಪಿಸುತ್ತಿದ್ದಾರೆ.

ತಮ್ಮ ನ್ಯಾಯಬದ್ಧ ಬೇಡಿಕೆಗೋಸ್ಕರ, ತಮ್ಮ ಮೇಲಾಗುವ ಅವಿರತ ಪ್ರಹಾರಗಳ ವಿರುದ್ಧ ದೇಶದ ಕಾರ್ಮಿಕವರ್ಗ ಸಿಡಿದೆದ್ದಿರುವುದು ಅವರ ಕಣ್ಣುರಿಗೆ ಕಾರಣವಾಗಿದೆ. ಈ ರೀತಿ ಪ್ರಲಾಪಿಸುವವರಲ್ಲಿ ನಮ್ಮ ಗುಂಡೂರಾಯರೂ ಹಿಂದೆ ಬಿದ್ದಿಲ್ಲ. ಮಾಟಾಳ್ ಜೊತೆ ವೇದಿಕೆಯ ಮೇಲೆ ನಿಂತು ಬಾಯಿಗೆ ಬಂದದ್ದನ್ನು ಬೊಗಳುತ್ತಿದ್ದಾರೆ.

ಎಲ್ಲ ವಿರೋಧ ಪಕ್ಷಗಳೂ ಈ ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಕಾಂಗ್ರೆ

(ಕಡೇ ಪುಟ ನೋಡಿ)

ಮಾರ್ಕ್ಸ್‌ವಾದಿ ಸೌಂದರ್ಯಶಾಸ್ತ್ರ

ವೈಜ್ಞಾನಿಕ ಸಮತಾವಾದದ ಸಂಸ್ಥಾಪಕರಾದ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗೆಲ್ಸರು ಮಹಾ ಪ್ರತಿಭಾಶಾಲಿಗಳಾಗಿದ್ದರು. ಜಗತ್ತಿನ ಕಲೆಯ ಎಲ್ಲ ಪ್ರಕಾರಗಳ ಆಳವಾದ ಅಭ್ಯಾಸಮಾಡಿದವರಾಗಿದ್ದರು.

ಪಾರಂಪರಿಕ ಸೌಂದರ್ಯಶಾಸ್ತ್ರದ ಸಂಕೀರ್ಣ ಪ್ರಶ್ನೆಗಳನ್ನು ಉತ್ತರಿಸುವದಷ್ಟಲ್ಲದೆ, ಅವರು ವೈಜ್ಞಾನಿಕ ಸೌಂದರ್ಯಶಾಸ್ತ್ರದ ಮೂಲಭೂತ ನಿಯಮಗಳನ್ನು ಹೊಸದಾದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ.

ಇಡೀ ಬದುಕನ್ನೆ ಸತ್ಯದ ಪ್ರಖರ ದೃಷ್ಟಿಯಿಂದ ಅವಲೋಕಿಸುವ ಮಾರ್ಕ್ಸ್‌ವಾದಿಗಳು ಮನುಷ್ಯನ ಸಮಾಜ ಜೀವನದ ಯಾವ ರಂಗವನ್ನೂ ಅಭ್ಯಸಿಸದೆ ಬಿಡುವಂತಿಲ್ಲ. ಅಂತೆಯೆ ಮನುಷ್ಯ ಸಮಾಜದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿರುವ ಸಮಾಜದ ಮೇಲ್ ರಚನೆಗಳಲ್ಲಿ ಒಂದಾದ ಕಲೆಯ ಬಗ್ಗೆ ಅವರು ಆಳವಾದ ಚಿಂತನೆ ಮಾಡಲೇಬೇಕಿತ್ತು.

ಯಾವುದೇ ಸಮಾಜದ ನಿರ್ಧಾರಕ ತಳಹದಿ ಅದರ ಆರ್ಥಿಕ ರಚನೆ ಎಂಬುದು ಬಹು ಮುಖ್ಯವಾದ ಸಂಗತಿ. ಇದರ ಮೇಲೆ ಬೆಳೆದು ಬರುವ ಮೇಲ್‌ರಚನೆ (Superstructure)ಗಳು ಆ ಸಮಾಜ ವ್ಯವಸ್ಥೆಯ ವಿವಿಧ ರೂಪಗಳನ್ನು ಎತ್ತಿತೋರಿಸುತ್ತವೆ. ಸಂಸ್ಕೃತಿಯನ್ನು ಈ ಖಚಿತ ತಿಳುವಳಿಕೆಯ ಮೇಲೆ ಮಾತ್ರ ನಿರ್ದಿಷ್ಟವಾಗಿ ನಿರೂಪಿಸಲು ಸಾಧ್ಯ. ಚಿರಂತನವಾದ ಜಾಗತಿಕ ದೃಷ್ಟಿಕೋನ ಇಂಥ ಸತ್ಯಗಳ ಮೇಲೆ ಮಾತ್ರ ನಿಂತಿರುತ್ತದೆ.

ಚರಿತ್ರೆಯನ್ನು ಭೌತವಾದಿ ವಿಚಾರಧಾರೆಯಿಂದ ಮಾತ್ರ ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಎಂಬುವದನ್ನು ಚರಿತ್ರೆಯೆ ಮತ್ತೆ ಮತ್ತೆ ಸ್ಪಷ್ಟಪಡಿಸುತ್ತ ಬಂದಿದೆ. ಏಕೆಂದರೆ ಬದುಕನ್ನು ಮತ್ತು ಪ್ರಕೃತಿಯನ್ನು ಚಾರಿತ್ರಿಕ ಭೌತವಾದ ಮತ್ತು ದ್ವಂದ್ವಾತ್ಮಕ ಭೌತವಾದಗಳು ಮಾತ್ರ ಯಥಾವತ್ತಾಗಿ ವೈಜ್ಞಾನಿಕವಾಗಿ ಗ್ರಹಿಸಿವೆ.

ಈ ಹಿನ್ನೆಲೆಯಲ್ಲೇ, ಈ ಆಧಾರದಲ್ಲೇ, ಕಲೆಯನ್ನು ಅರ್ಥೈಸಿದಾಗ ಮಾತ್ರ ಜಾಗತಿಕ ಚಿರಂತನ ದೃಷ್ಟಿಕೋನವೊಂದು ಕಲೆಯ ಬಗ್ಗೆ ರೂಪುಗೊಂಡೀತು.

ಸೌಂದರ್ಯ ಶಾಸ್ತ್ರದ ಹಲವು ಸಮಸ್ಯೆಗಳಲ್ಲಿ, ಕಲೆ ಮತ್ತು ವಾಸ್ತವಿಕತೆ (Art and Reality)ಗಳ ಸಂಬಂಧದ ಸಮಸ್ಯೆ ಬಹು ಮುಖ್ಯವಾದುದು. ಇದನ್ನು ಹೊಸವಿಚಾರಗಳ ಬೆಳಕಿನಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಬಗೆಹರಿಸಲೆತ್ನಿಸಿದರು.

ಆದರ್ಶವಾದಿ ಸೌಂದರ್ಯ ಮೀಮಾಂಸೆ, ಕಲೆಯನ್ನು ಆದರ್ಶದ ಪುನಃಸೃಷ್ಟಿ ಎಂದೂ, ವಾಸ್ತವದ ಹೊರಗೆ ನಿಲ್ಲುವಂಥದೆಂದೂ ಹೇಳಿತ್ತು. ಹೀಗಾಗಿ ಮೀಮಾಂಸಕರಿಗೆ ಯಾವುದೇ ಕಲಾರೂಪದ, ಉಗಮ, ಬೆಳವಣಿಗೆ, ಅರಳುವಿಕೆ, ನಶಿಸುವಿಕೆ ಎಲ್ಲವೂ ಅಸಮಗ್ರವಾಗಿ ಕಂಡವು. ಇವರು ಮಾನವ ಸಾಮಾಜಿಕ ಬದುಕಿನಿಂದಾಚೆ, ಇವಕ್ಕೆಲ್ಲ ಉತ್ತರ ಹುಡುಕುತ್ತ ಬಂದುದರಿಂದಲೇ ಈ ಪರಿಸ್ಥಿತಿಯುಂಟಾಯಿತೆಂದು ಸ್ಪಷ್ಟವಾಗುತ್ತದೆ. ಕಲೆ ಕಲೆಗಾಗಿ ಎಂಬ ವಾದದ ಪೊಳ್ಳುತನವನ್ನು. ಕಲೆ ಸಮಾಜದಿಂದ, ಸಮಾಜಕ್ಕಾಗಿ ಎಂಬ ತತ್ವದ ಅನಿವಾರ್ಯತೆಯನ್ನು 'ಕಲೆ ಮತ್ತು ಸಾಮಾಜಿಕ ಜೀವನ' ಗ್ರಂಥದಲ್ಲಿ ಪ್ಲೆಖನೊವ್ ಅದ್ಭುತದಾದ ರೀತಿಯಲ್ಲಿ ಚರ್ಚಿಸಿದ್ದಾರೆ.

ಕಲೆಯ ಸತ್ವ, ಉಗಮ, ಬೆಳವಣಿಗೆ ಮತ್ತು ಅದರ ಸಾಮಾಜಿಕ ಪಾತ್ರ ಎಲ್ಲವೂ ಆಯಾ ಸಮಾಜದ ಆರ್ಥಿಕ ರಚನೆಯ ಮೇಲೆ ನಿಂತ ಆಯಾ ಸಮಾಜ ವ್ಯವಸ್ಥೆಯ ಇಡಿಯಾದ ವಿಶ್ಲೇಷಣೆಯಿಂದ ಮಾತ್ರ ಸಾಧ್ಯವೆಂದು ಮಾರ್ಕ್ಸ್ ಮತ್ತು ಎಂಗೆಲ್ಸರ ಅಭಿಮತ.

ಹೀಗಾಗಿ ಕಲೆಯ ಅಭ್ಯಾಸ, ಆಯಾಕಾಲದ ಇತರೆಲ್ಲ ಶಾಸ್ತ್ರಗಳ, ಸಮಾಜ ವ್ಯವಸ್ಥೆಯ ಅನಿವಾರ್ಯ ಅಭ್ಯಾಸವನ್ನು, ಆಯಾಕಾಲದ ಎಲ್ಲ ರಂಗಗಳ ವೈಜ್ಞಾನಿಕ ವಿಶ್ಲೇಷಣೆ ತಿಳುವಳಿಕೆಯನ್ನು ಅವಲಂಬಿಸಿದೆ ಎಂಬುದು ಮನದಟ್ಟಾಗುತ್ತದೆ. ಸಾಹಿತ್ಯಾಭ್ಯಾಸಿಗೆ, ವಿಮರ್ಶಕನಿಗೆ ಅರ್ಥಶಾಸ್ತ್ರ,ರಾಜಕೀಯ ಶಾಸ್ತ್ರ; ತತ್ವಜ್ಞಾನ, ವಿಜ್ಞಾನದ ಅನೇಕ ಶಾಖೆಗಳ ಮೂಲಭೂತ ತಿಳುವಳಿಕೆಯ ಅಗತ್ಯ ತೋರುವದು ಹೀಗೆ.

ಈ ಎಲ್ಲ ಶಾಸ್ತ್ರಗಳ ಸತ್ಯದ ಬೆಳಕಿನಲ್ಲಿ ಮಾತ್ರ ಕಲೆಗಳನ್ನು ಪರೀಕ್ಷೆಗೆ ಒಳಪಡಿಸಿ, ಅರ್ಥೈಸಿಕೊಳ್ಳಲು, ಮೀಮಾಂಸಕ ಸೂತ್ರಗಳನ್ನು ರಚಿಸಲು ಸಾಧ್ಯ.

ಆಯಾ ಸಾಮಾಜಿಕ ವ್ಯವಸ್ಥೆಯಲ್ಲಿ ಆಯಾ ಉತ್ಪಾದನಾ ಸಂಬಂಧಗಳು, ಆಯಾ ಉತ್ಪಾದನಾ ಶಕ್ತಿಗಳು ಆ ಕಾಲದ ಆರ್ಥಿಕ ರಚನೆಯ ಮೂಲಾಂಶಗಳು. ಇವು ಆ ಸಮಾಜದ ಒಟ್ಟು ತಿಳುವಳಿಕೆಯ ಮೂಲಭೂತ ಸಂಗತಿ.

ಕಲೆ ಸಾಮಾಜಿಕ ಪ್ರಜ್ಞೆಯ ಒಂದು ರೂಪ. ಕಲೆಯ ಬೆಳವಣಿಗೆಯ ಹೆಜ್ಜೆಗುರುತುಗಳನ್ನು ಆಯಾ ಜನಾಂಗದ ಸಾಮಾಜಿಕ ಬದುಕಿನಲ್ಲೆ ಅವಲೋಕಿಸಬೇಕಾಗುತ್ತದೆ.

ಕಲೆಯ ಸಾಮಾಜಿಕ ಸ್ವರೂಪವನ್ನು ವಿಶ್ಲೇಷಿಸಿ, ಇತಿಹಾಸದಲ್ಲಿ ಅದರ ಬೆಳವಣಿಗೆಯನ್ನು ಹೊರಗೆಡಹುತ್ತ ಮಾರ್ಕ್ಸ್ ಮತ್ತು ಎಂಗೆಲ್ಸರು, ವರ್ಗಗಳ ಮಧ್ಯೆ ಘರ್ಷಣೆಯಿರುವ ಸಮಾಜಗಳಲ್ಲಿ, ಕಲೆ ವರ್ಗ ವೈರುಧ್ಯಗಳಿಂದ ಪ್ರಭಾವಿತವಾಗಿರುವದೆಂಬುದನ್ನು ಮತ್ತು ನಿರ್ದಿಷ್ಟ ವರ್ಗಗಳ ರಾಜಕೀಯ ಮತ್ತು ಆದರ್ಶಗಳ ವಿಚಾರಧಾರೆಗಳಿಂದ ಪ್ರಭಾವಗೊಂಡಿರುತ್ತದೆಂಬುದನ್ನು ದಾಖಲೆಗಳ ಮೂಲಕ ತೋರಿಸುತ್ತಾರೆ.

ಮಾನವನಿಗೆ ಸೌಂದರ್ಯ ಪ್ರಜ್ಞೆ ಹೇಗೆ ಹುಟ್ಟುತ್ತದೆಂಬ ಬಗ್ಗೆಯೂ ಆದರ್ಶವಾದಿ ಮತ್ತು ಭೌತವಾದಿ ಚಿಂತಕರಲ್ಲಿ ಭಿನ್ನಾಭಿಪ್ರಾಯವಿದೆ. ಪ್ರತಿಭೆ ದೈವದತ್ತವಾದುದು, ಎಲ್ಲೊ ಕೆಲವರಿಗೆ ಮಾತ್ರ ವರವಾಗಿ ದೊರಕಿರುವಂಥದೆಂದು ಆದರ್ಶವಾದಿ ಮೀಮಾಂಸಕರು ಹೇಳಿದರೆ, ಭೌತವಾದಿಗಳು, ಕಲಾತ್ಮಕ ಸಾಮರ್ಥ್ಯ, ಕಲಾತ್ಮಕವಾಗಿ ಜಗತ್ತನ್ನು ಗ್ರಹಿಸುವ ಶಕ್ತಿ, ಸೌಂದರ್ಯವನ್ನು ಅಭಿವ್ಯಕ್ತಿಸುವ ಯೋಗ್ಯತೆ, ಎಲ್ಲವೂ ಮಾನವ ಸಮಾಜದ ದೀರ್ಘವಾದ ಬೆಳವಣಿಗೆಯಿಂದ, ಮಾನವನ ಚಟುವಟಿಕೆ (Labour)ಗಳಿಂದ ಮಾತ್ರವೇ ಹುಟ್ಟಿದುದೆಂದು ಹೇಳುತ್ತಾರೆ. ಎಂಥ ಮಹಾಕಾವ್ಯಗಳನ್ನೂ ಮೀರಿಸುವ ಪ್ರತಿಭೆಯನ್ನು ಜನಸಾಮಾನ್ಯರು, ತಮ್ಮ ಜನಪದ ಗೀತೆ ಹಾಡು. ಕಥೆ ಮುಂತಾದುವುಗಳಲ್ಲಿ ತೋರಿಸು

ಎಸ್. ಎಸ್. ಹಿರೇಮಠ

ತ್ತಾರೆ. ಜನಾಂಗವೇ ಏಕೆ ಅದರ ನಿರ್ಮಾಪಕರಾಗುತ್ತಾರೆಂಬುದನ್ನು ವಿವರಿಸಲು ಭೌತವಾದಿ ವಿವರಣೆಯಿಂದ ಮಾತ್ರವೇ ಸಾಧ್ಯವಾಗುತ್ತದೆ.

ಮನುಷ್ಯನ ಚಟುವಟಿಕೆ, ಕರ್ತೃತ್ವ ಶಕ್ತಿಗಳು, ಸೌಂದರ್ಯವನ್ನು ಗ್ರಹಿಸುವಲ್ಲಿ, ಅಭಿವ್ಯಕ್ತಿಸುವಲ್ಲಿ ನಿರ್ದಿಷ್ಟ ಪಾತ್ರ ವಹಿಸಿದವು. ಎಂಗೆಲ್ಸ ತಮ್ಮ 'Dialectics of Nature'ನಲ್ಲಿ ಶ್ರಮವು ಮನುಷ್ಯನ ಕೈಗಳಿಗೆ (ಮೆದುಳಿಗೂ ಕೂಡ) ಪರಿಪೂರ್ಣತೆಯನ್ನು ದೊರಕಿಸುತ್ತ ಬಂತೆಂದು ಹೇಳುತ್ತಾನೆ. ಅಂತೆ ಮಾನವನ ಸೌಂದರ್ಯ ಪ್ರಜ್ಞೆ ಜನ್ಮಜಾತವಲ್ಲ, ಸಾಮಾಜಿಕವಾಗಿ ಮನುಷ್ಯ ಗಳಿಸಿಕೊಂಡ ಗುಣವಿಶೇಷ.

ವಸ್ತು ಮತ್ತು ರೂಪ

ಕಲೆಯ ವಸ್ತು (content) ಮತ್ತು ರೂಪ (form)ಗಳು ಶಾಶ್ವತವಾಗಿ ಒಂದೇ ರೀತಿಯಾಗಿರುವುದಿಲ್ಲ. ಭೌತಿಕ ಪ್ರಪಂಚದ ಮತ್ತು ಸಮಾಜದ ಸಹಜವಾದ ಬೆಳವಣಿಗೆಯ ಜತೆಗೆ ಅವೂ ಕೂಡ ನಿರ್ದಿಷ್ಟ ನಿಯಮಗಳಿಗೆ ಒಳಪಟ್ಟು ಬದಲಾಗುತ್ತ ಬೆಳೆಯುತ್ತ ಬರುತ್ತವೆ. ಅಂತೆಯೆ ಕನ್ನಡದಲ್ಲಿ, ಚಂಪೂಯುಗ, ಷಟ್ಪದಿ ರಗಳೆಗಳ ವಚನಗಳ ಕಾಲಗಳನ್ನು ವಿಶ್ಲೇಷಿಸಲು ಈ ಹಿನ್ನೆಲೆ ಬೇಕಾಗುತ್ತದೆ. [ವಿಶೇಷ ಅಭ್ಯಾಸ-'ಒಡನಾಡಿ'-7,8-1976]

ಪ್ರತಿಯೊಂದು ಐತಿಹಾಸಿಕ ಕಾಲಾವಧಿಯೂ, ನಿರ್ದಿಷ್ಟ ಕಲಾದರ್ಶನಗಳನ್ನು, ವಿಚಾರಧಾರೆಗಳನ್ನು ಒಳಗೊಂಡಿರುತ್ತದೆ ಮತ್ತು ತನ್ನ ಚೌಕಟ್ಟಿನ ಒಳಗಡೆ, ಸ್ವಭಾವದ ಒಳಗಡೆ, ನಿರ್ದಿಷ್ಟವಾದ, ಬೇರೆ ಪರಿಸ್ಥಿತಿಯಲ್ಲಿ ಪುನರಾವೃತ್ತಿಯಾಗದ ಕಲಾಕೃತಿಗಳನ್ನು ಕೊಡುತ್ತದೆ.

ಕಲಾಕೃತಿಗಳ ವಸ್ತುವನ್ನು, ಸಮಾಜ ಬೆಳವಣಿಗೆಯ ಹಂತ ಮತ್ತು ಸಮಾಜ ರಚನೆಗಳು ನಿರ್ಧರಿಸುತ್ತವೆ. ಅಂತೆಯೆ ರಾಮಾಯಣ, ಮಹಾಭಾರತ, ಪುರಾಣಗಳು, ಪಂಪ ಇವೆಲ್ಲ ಈಗ ಏಕೆ ಹುಟ್ಟಲಾರವು ಎಂದು ಹೇಳಲಿಕ್ಕಾಗುತ್ತದೆ.

ಆರ್ಥಿಕ ರಚನೆಯನ್ನು ತಳಹದಿಯಾಗುಳ್ಳ, ಸಮಾಜ ವ್ಯವಸ್ಥೆಯ ಹಿನ್ನೆಲೆಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಅರಿಯಬೇಕಾಗುತ್ತದೆ, ಆದರೆ ಒಂದಕ್ಕೊಂದು ಪೂರಕವೂ, ಪರಸ್ಪರ ಪ್ರಭಾವಶಾಲಿಯೂ ಆಗಿರುವ ಆಂತರಿಕ ಸಂಕೀರ್ಣ ವಸ್ತುಸ್ಥಿತಿಗಳೂ ಕಲೆಯ ಮೇಲೆ ಪರಿಣಾಮ ಬೀರುತ್ತವೆಂಬುದನ್ನು ಮಾರ್ಕ್ಸ್ ಮತ್ತು ಎಂಗೆಲ್ಸ ಗುರುತಿಸದೆ ಹೋಗಿಲ್ಲ.

ಆರ್ಥಿಕ ವ್ಯವಸ್ಥೆಯ ಜಡರೂಪದ ಉತ್ಪಾದನೆ ಕಲೆ, ಎಂದು ಅವರೆಂದೂ ಹೇಳಲಿಲ್ಲ.

ಸಾಮಾಜಿಕ ಪ್ರಜ್ಞೆಯ ಅನೇಕ ರೂಪಗಳು, ಕಲಾಭಿವ್ಯಕ್ತಿಯೂ ಸೇರಿ) ಚುರುಕಿನಿಂದ, ತಮ್ಮ ಸಮಾಜದ ವಾಸ್ತವಗಳ ಮೇಲೆ ಪ್ರಭಾವಗೊಳಿಸುವವು.

ಯಾಂತ್ರಿಕವಲ್ಲದ ರೀತಿಯಿಂದ ಕಲೆ ಸಮಾಜದ ಜೀವನ, ಮತ್ತು ನಿರ್ದಿಷ್ಟ ವರ್ಗತತ್ವಗಳ ಪ್ರತಿಬಿಂಬವಾಗಿರುತ್ತದೆಂಬುದನ್ನು ಮಾರ್ಕ್ಸ್‌ವಾದಿಗಳು ತಿಳಿಯಪಡಿಸುತ್ತಾರೆ.

ಸಮಾಜದ ಪ್ರಗತಿಯ ಸಾಮಾನ್ಯ ನಿಯಮಗಳಿಗೆ ಕಲೆಯ ಸೃಷ್ಟಿಶೀಲತೆಯೂ ಪೂರಕವಾಗಿರುತ್ತೆ. ಅಲ್ಲದೆ ಸಮಾಜ ಪ್ರಜ್ಞೆಯ ವಿಶೇಷರೂಪವೂ ಆಗಿರುತ್ತದೆ; ತನ್ನದೆ ಆದ ಭಿನ್ನ ಲಕ್ಷಣಗಳನ್ನು ನಿರ್ದಿಷ್ಟ ಮಾದರಿಗಳನ್ನು ಒಳಗೊಂಡಿರುತ್ತದೆ.

ಕಲೆ ಬೆಳೆಯುತ್ತ ಹೋದಂತೆ, ಅದರ ಸಾಪೇಕ್ಷ ಸ್ವಾತಂತ್ರ್ಯವು ಒಂದು ವಿಶಿಷ್ಟ ಲಕ್ಷಣವೆ ಆಗಿರುತ್ತದೆ. ಅಂತೆಯೆ ನಿರ್ದಿಷ್ಟ ಸಮಾಜ ರಚನೆಯಲ್ಲಿ ಹುಟ್ಟಿದ ಕಲಾಕೃತಿಗಳು ಆ ಸಮಾಜ ರಚನೆ ಹಾಳಾದ ಮೇಲೆಯೂ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುವದಿಲ್ಲ. ಈಗಲೂ ಕಾಳಿದಾಸ,ಷೇಕ್ಸಪೀಯರ, ಪಂಪಾದಿಗಳು ರಸಾನಂದ ಕೊಡಲು ಇದೆ ಕಾರಣ. ಕೆಲವಾದರೂ ಎಂದೂ ದೊರಕಿಸಲಾಗದಂಥ ಅಮೂಲ್ಯ ಕಲಾಕೃತಿಗಳೂ ಆದರ್ಶಗಳೂ ಆಗಿರಬಲ್ಲವು.

ಕಲೆಯ ಮತ್ತೊಂದು ವಿಶೇಷ ಲಕ್ಷಣವೆಂದರೆ, ಅದರ ಕ್ಷೋಭೆಯ ಅವಧಿಯಲ್ಲಿ, ಸಮಾಜದ ಬೇರೆ ರಂಗಗಳ ಪ್ರಗತಿಯ ಜತೆ ಸಹಜವಾದ ಹೊಂದಾಣಿಕೆಯಾಗುವುದಿಲ್ಲ ಎಂಬುದು.

ಭೌತಿಕ ಉಪರಚನೆಗೂ, ಅಥವಾ ಸಮಾಜದ ಸಾಮಾನ್ಯ ಬೆಳವಣಗೆಯ ಜತೆ ಕಲೆಯ ಕೆಲವು ಉನ್ನತ ಶಿಖರಗಳು ತಾಳೆ ಬೀಳುವುದಿಲ್ಲ. ಸಮಾಜ ಮತ್ತು ಕಲೆಯ ಬೆಳವಣಿಗೆಯ ಮಧ್ಯೆ ತಾಳೆಬೀಳದ ಈ ಸ್ಥಿತಿಗೆ ಮಾರ್ಕ್ಸ್ ಕಾರಣ ಹುಡುಕುತ್ತ ಯಾವುದೇ ಕಾಲಘಟ್ಟದ ಚೈತನ್ಯಯುತ ಸಂಸ್ಕೃತಿ ಬರಿಯ ಭೌತಿಕ ಉತ್ಪಾದನೆಯಿಂದ ಮಾತ್ರ ನಿರ್ಧಾರವಾಗುವುದಿಲ್ಲ, ಸಮಾಜದ ಭೌತಿಕ ತಳಹದಿಯ ಜತೆಗೆ ಆ ಕಾಲಕ್ಕೆ ವಿಶಿಷ್ಟವಾಗಿರುವ ಸಾಮಾಜಿಕ ಸಂಬಂಧಗಳಿಂದಲೂ ನಿರ್ಧಾರವಾಗುತ್ತದೆನ್ನುತ್ತಾನೆ.

ಸಮಾಜದ ಸಂಬಂಧಗಳ ವಿಶಿಷ್ಟ ಸ್ವಭಾವ, ವರ್ಗ ಘರ್ಷಣೆಯ ಬೆಳವಣಿಗೆಯ ಮಟ್ಟ, ಮನುಷ್ಯನ ವ್ಯಕ್ತಿತ್ವದ ಬೆಳವಣಿಗೆಗೆ ಬೇಕಾದ ವಿಶಿಷ್ಟ ಪರಿಸ್ಥಿತಿಗಳ ಅಸ್ತಿತ್ವ ಇವೆಲ್ಲ ಕಲೆಯ ಮೇಲೆ ಮಹತ್ವದ ಪರಿಣಾಮ ಮಾಡುತ್ತವೆ.

ಬಂಡವಾಳಶಾಹಿ ಸಮಾಜಕ್ಕೆ ಸಂಬಂಧಿಸಿದಂತೆ ಈ ಅಸಮತೋಲನವು, ಬಂಡವಾಳಶಾಹಿಯ ಮೂಲಭೂತ ವೈರುಧ್ಯದ ಅಭಿವ್ಯಕ್ತಿಯೆಂದೇ ಅರಿಯಬೇಕೆಂದು ಮಾರ್ಕ್ಸ್ ಮತ್ತು ಎಂಗೆಲ್ಸ ಹೇಳುತ್ತಾರೆ.

ಬಂಡವಾಳಶಾಹಿ ಉತ್ಪಾದನೆ, ಚೈತನ್ಯಾತ್ಮಕ ಅಭಿವ್ಯಕ್ತಿಯ ಕೆಲವು ಪ್ರಕಾರಗಳಿಗೆ (ಉದಾ-ಕಲೆ ಮತ್ತು ಸಾಹಿತ್ಯ)-ವಿರುದ್ಧವಾಗಿರುತ್ತದೆ.

ಶೋಷಕ ಬಂಡವಾಳಶಾಹಿ ವ್ಯವಸ್ಥೆಯು ಮಾನವೀಯ ಆದರ್ಶಗಳ ಜತೆ, ವೈರುಧ್ಯಗಳನ್ನು ಹೊಂದಿರುತ್ತದೆ. ಇದು ಪ್ರತಿಭಾವಂತ ಕಲೆಗಾರರಿಗೆ ಪ್ರೇರಣೆ ಒದಗಿಸುತ್ತದೆ. ಹೆಚ್ಚು ಪ್ರತಿಭಾವಂತ ಕಲೆಗಾರರು, ಬಂಡವಾಳಶಾಹಿ ವಾಸ್ತವ ಮತ್ತು ತಮ್ಮ ಆದರ್ಶಗಳ ಮಧ್ಯೆ ವೈರುಧ್ಯ ಹೊಂದಿರುತ್ತಾರೆ. ಅಮಾನವೀಯ ಬಂಡವಾಳಶಾಹಿ ಸಂಬಂಧಗಳ ವಿರುದ್ಧ ಅವರು ಪ್ರತಿಭಟಿಸುತ್ತಾರೆ. ಅಂತೆಯೆ, ಕಮ್ಯುನಿಸ್ಟ್ ವಿರೋಧಿಯಾದ ಶಿವರಾಂಕಾರಂತರೂ ಕಮ್ಯುನಿಸ್ಟರ

(7ನೇ ಪುಟ ನೋಡಿ)

ಕರ್ನಾಟಕ ರ್ಯಾಜದಲ್ಲಿ

-ಎನ್ನೆ

ಕಾಂಗ್ರೆ ಪದಚ್ಯುತಿಯೇ ವಿರೋಧಿ ಪಕ್ಷದ ಗುರಿ-ಇಂದಿರಾಗಾಂಧಿ

"ವಿರೋಧಿ ಪಕ್ಷಗಳು ಈಗ ಮತ್ತೆ ಒಂದಾಗಲು ಯತ್ನಿಸುತ್ತಿರುವುದು ಕಾಂಗ್ರೆಸ್ (ಐ) ಪಕ್ಷವನ್ನು ಅಧಿಕಾರದಿಂದ ತಳ್ಳಿ ಕುರ್ಚಿ ಕಿತ್ತು ಕೊಳ್ಳುವುದಕ್ಕಾಗಿಯೇ ಹೊರತು ಬೇರೇನೂ ಅಲ್ಲ" ಎಂದು ಪ್ರಧಾನಿ ಇಂದಿರಾಗಾಂಧಿಯವರು ಮೈಸೂರಲ್ಲಿ ಸಾರ್ವಜನಿಕ ಭಾಷಣದಲ್ಲಿ ಅಪಾದಿಸಿದರು.

ಚಿಕ್ಕಮಕ್ಕಳು ಚಿಣಿ-ದಂಡಾ ಅಥವಾ ಗೋಲಿ ಆಟ ಆಡುವುದಾಗಲೀ, ಕ್ರಿಕೆಟ್, ಹಾಕೀ ಮೊದಲಾದ ಆಟಗಳನ್ನಾಗಲೀ ಆಡುವುದು ಗೆಲ್ಲುವ ಸಲುವಾಗಿಯೇ ಅಲ್ಲವೇ ? ಖ್ಯಾತಿ-ಪ್ರಶಸ್ತಿ ಪಡೆಯುವ ಉದ್ದೇಶದಿಂದಲ್ಲವೇ ? ಆಟದಲ್ಲಿ ಪ್ರಶಸ್ತಿ ಪಡೆಯುವುದು; ರಾಜಕೀಯದಲ್ಲಿ ಪ್ರಭುತ್ವವನ್ನು ವಶಪಡಿಸಿಕೊಳ್ಳುವುದು.

ಹೌದು, ಕುರ್ಚಿಗಾಗಿ ವಿರೋಧಿ ಪಕ್ಷಗಳು ಒಂದಾಗುತ್ತಿದ್ದಾರೆ. ಕುರ್ಚಿಗಾಗಿ ಚಳುವಳಿ ಹೂಡುತ್ತಿದ್ದಾರೆ. ಇಲ್ಲಿ ಕುರ್ಚಿ ಎಂದರೆ ಅಧಿಕಾರ, ಸರಕಾರಿ ಯಂತ್ರ, ಪ್ರಭುತ್ವ. ಕಾಂಗ್ರೆಸ್ (ಐ) ಪಕ್ಷವನ್ನು ಅಧಿಕಾರದಿಂದ ಸರಿಸಿ ಆ ಸ್ಥಾನದಲ್ಲಿ ವಿರೋಧಿ ಪಕ್ಷಗಳು ಕುಳಿತುಕೊಳ್ಳಲು ಒಂದಾಗುತ್ತಿದ್ದಾರೆ. ಇದರಲ್ಲಿ ತಪ್ಪೇನಿದೆ. ಇಂದಿರಾಗಾಂಧಿ ಪಕ್ಷಕ್ಕೇ ದೇಶದ ಆಡಳಿತೆಯನ್ನು ಅಮರವಾಗಿ ದತ್ತು ಕೊಡಲಾಗಿದೆಯೇ ? ಇಲ್ಲ. ಹಾಗಾದರೆ ಈ ಅಪಸ್ವರ ಯಾಕೆ ? ಅಧಿಕಾರದಲ್ಲಿರಲಿ ಅಥವಾ ಇಲ್ಲದಿರಲಿ ತಾವು ಸದಾ ಜನಸೇವೆಯಲ್ಲೇ ಇರುವುದಾಗಿ ಇಂದಿರಾಗಾಂಧಿಯವರು ಸಾರಿದ್ದಾರೆ. ಹಾಗಾದರೆ ವಿರೋಧಿ ಪಕ್ಷಗಳು ಒಂದಾಗುತ್ತಿರುವುದನ್ನು ಕಂಡು ಭೀತಿಗೊಂಡಿರುವುದೇಕೆ ? ತನ್ನ ವರ್ಗದ-ಹಿರೇ ಬಂಡವಾಳದಾರಿ-ಭೂಮಾಲಕವರ್ಗದ-ಹಿತ ಸಾಧಿಸಲು ಅಧಿಕಾರ ಬೇಲೇಬೇಕು. ಇಲ್ಲವಾದರೆ ಜನಸೇವೆಗೆ ಅವಕಾಶವಿಲ್ಲವಲ್ಲ.

ಸ್ಟಾಲಿನ್ನರ "ಪ್ರಭುತ್ವ" ಮತ್ತು ಏಂಗಲ್ಸರ "ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವ" ಎಂಬ ಪುಸ್ತಕಗಳನ್ನು ಇಂದಿರಾಗಾಂಧಿಯವರು ಓದಿದಂತೆ ಕಂಡುಬರುವುದಿಲ್ಲ. ಪ್ರಭುತ್ವದ ಪ್ರಶ್ನೆ ಅತಿ ಪ್ರಾಮುಖ್ಯವಾದುದು. ಪ್ರಭುತ್ವವನ್ನು ವಶಪಡಿಸಿಕೊಂಡು ಇಂದಿರಾಗಾಂಧಿ ಅಧಿಕಾರ ನಡೆಸುತ್ತಿದ್ದಾರೆ. ಆ ಪ್ರಭುತ್ವವನ್ನು ವಶಪಡಿಸಿಕೊಳ್ಳಬೇಕೆಂದೇ ವಿರೋಧಿ ಪಕ್ಷಗಳೂ ಪ್ರಯತ್ನ ನಡೆಸಿವೆ. ಆ ಪ್ರಯತ್ನ ಏಕಪಕ್ಷೀಯವಾಗಿ ಅಥವಾ ಬಹುಪಕ್ಷೀಯವಾಗಿಯೂ ಇರಬಹುದು.

"ಆಪ್ತದಲ್ಲೇ ಆಗಲಿ ಅಥವಾ ಹೆಚ್ಚು ನಾಗರೀಕನಾಗಿರುವ ಯಾವುದೇ ದೇಶದಲ್ಲಾಗಲೀ, ಯಾವ ಪಕ್ಷವನ್ನು ತೆಗೆದುಕೊಂಡರೂ, ಹೆಚ್ಚುಕಮ್ಮಿ ಎಲ್ಲಾ ರಾಜಕೀಯ ವಿವಾದಗಳೂ ಮತ್ತು ಭಿನ್ನಾಭಿಪ್ರಾಯಗಳೂ ಪ್ರಭುತ್ವದ ಕಲ್ಪನೆಗೆ ಸಂಬಂಧಪಟ್ಟಿರುವುದನ್ನು ಕಾಣುತ್ತೇವೆ. ಬಂಡವಾಳಗಾರರ ದೇಶದಲ್ಲಿ, ಪ್ರಜಾಸತ್ತಾತ್ಮಕ ಗಣಾಧಿಪತ್ಯದಲ್ಲಿ...ಪ್ರಭುತ್ವವು ಜನತೆಯ ಸಂಕಲ್ಪವನ್ನು ವ್ಯಕ್ತಪಡಿಸುತ್ತದೆಯೇ, ಜನರ ಸಾಮಾನ್ಯ ನಿರ್ಧಾರದ ಮೊತ್ತವಾಗಿಯೇ, ರಾಷ್ಟ್ರೀಯ ಸಂಕಲ್ಪವನ್ನು ವ್ಯಕ್ತಪಡಿಸುತ್ತದೆಯೇ–ಇತ್ಯಾದಿ ಲಕ್ಷಣಗಳನ್ನು ಪ್ರಭುತ್ವವು ಹೊಂದಿದೆಯೇ ಅಥವಾ ಕಾರ್ಮಿಕ ವರ್ಗ ಮತ್ತು ರೈತ ಸಮುದಾಯದ ಮೇಲೆ ತಮ್ಮ ಅಧಿಕಾರವನ್ನು ಉಳಿಸಿಕೊಂಡು ಹೋಗಲು ಆಯಾ ದೇಶದ ಬಂಡವಾಳಗಾರರಿಗೆ ನೆರವಾಗಿರುವ ಯಂತ್ರವಾಗಿದೆಯೇ ? ಈ ಒಂದು ಮೂಲಭೂತ ಪ್ರಶ್ನೆಯ ಸುತ್ತಲೇ ಪ್ರಪಂಚದ ಎಲ್ಲಾ ಕಡೆಯಲ್ಲೂ-ಎಲ್ಲಾ ರಾಜಕೀಯ ವಿವಾದಗಳು ಉಂಟಾಗಿರುವುವು." ಎಂದು ಕಾರ್ಲ ಮಾರ್ಕ್ಸರು "ಕೂಲಿ, ಕೆಲಸ, ಬಂಡವಾಳ"ದಲ್ಲಿ ವಿವರಿಸಿದ್ದಾರೆ.

"ಯಾವ ಪ್ರಭುತ್ವದಲ್ಲಿ ಜಮೀನು ಮತ್ತು ಉತ್ಪತ್ತಿಯ ಸಾಧನಗಳು ಖಾಸಗೀ ಸೊತ್ತಾಗಿವೆಯೋ, ಬಂಡವಾಳದ ಪ್ರಾಬಲ್ಯವಿದೆಯೋ, ಅಂತಹ ಪ್ರತಿಯೊಂದು ಪ್ರಭುತ್ವವು, ಎಷ್ಟೇ ಪ್ರಜಾ ಸತ್ತಾತ್ಮಕವಾಗಿದ್ದರೂ, ಅದು ಬಂಡವಾಳಗಾರರ ಪ್ರಭುತ್ವವೆಂದೂ. ಕಾರ್ಮಿಕವರ್ಗವನ್ನೂ ಬಡರೈತರನ್ನೂ ಅಧೀನದಲ್ಲಿಟ್ಟುಕೊಂಡಿರಲು ಬಂಡವಾಳಗಾರರು ಉಪಯೋಗಿಸುವ ಯಂತ್ರವೆಂದೂ ಏಂಗಲ್ಸರ "ಕುಟುಂಬ, ಖಾಸಗಿ ಆಸ್ತಿ, ಮತ್ತು ಪ್ರಭುತ್ವ" ದಲ್ಲಿ ಹೇಳುತ್ತದೆ. ಹಾಗೆಯೇ "ಸಾರ್ವತ್ರಿಕ ಮತದಾನ ಪದ್ಧತಿ, ರಾಜ್ಯಾಂಗ ರಚನಾ ಪರಿಷತ್ತು. ಶಾಸನ ಸಭೆ ಇವುಗಳೆಲ್ಲವೂ ಹೊರ ರೂಪ ಮಾತ್ರವೆಂದೂ, ಒಂದು ವಿಧವಾದ ವಾಗ್ದಾನ ಪತ್ರ ಮಾತ್ರವೆಂದೂ, ಇವುಗಳಿಂದ ವಿಷಯದ ನಿಜಸತ್ಯವು ಬದಲಾಯಿಸುವುದಿಲ್ಲವೆಂದೂ" ಅದೇ ಪುಸ್ತಕ ಹೇಳುತ್ತದೆ.

ಕಾರ್ಲಮಾರ್ಕ್ಸರ ತತ್ವಗಳನ್ನು ಇಂದಿರಾಗಾಂಧಿ ಅಭ್ಯಾಸ ಮಾಡಿರದಿದ್ದರೂ ಕೂಡ, ಪ್ರಭುತ್ವದ ಸಂಪೂರ್ಣ ಅರ್ಥಮಾತ್ರ ಅವರಿಗೆ ಗೊತ್ತು. ಆ ಕಾರಣದಿಂದಲೇ ತನ್ನ ಪ್ರಭುತ್ವವನ್ನು ಕಸಿದುಕೊಳ್ಳಲು ವಿರೋಧಿ ಪಕ್ಷಗಳು ಒಟ್ಟಾಗಿ ಪ್ರಯತ್ನ ನಡೆಸಿದ್ದಾರೆಂದು ಭೀತಿಗೊಳಗಾಗಿದ್ದಾರೆ. ಜನತಾ, ಲೋಕದಳ, ಕಾಂಗ್ರೆಸ್ (ಎಸ್) ಪಕ್ಷಗಳು ಒಂದಾಗಿ ಅಧಿಕಾರ ವಹಿಸಿಕೊಂಡರೂ ಕೂಡ ಇಂದಿರಾಗಾಂಧಿ ಅಂಜುವ ಕಾರಣವಿಲ್ಲ, ವರ್ಗಹಿತದ ದೃಷ್ಟಿಯಿಂದ ಇಂದಿರಾಗಾಂಧಿಯ ವರ್ಗದ ಹಿತರಕ್ಷಣೆಗೆ ಈ ಪಕ್ಷಗಳು ಬೆಂಬಲಿಸುತ್ತವೆಂಬುದನ್ನು ಈ ಮಹಾತಾಯಿ ತಿಳಿದುಕೊಂಡಿದ್ದರೂ ಕೂಡ, ತನ್ನ ಏಕಸ್ವಾಮ್ಯ ಕೈಬಿಡುತ್ತದೆಂಬ ಚಿಂತೆ ಮಾತ್ರ ಅವರನ್ನು ಆವರಿಸಿದೆ.

ಇಂದಿರಾಗಾಂಧಿಯ ನಿದ್ದೆ ಕೆಡಿಸುವ ಪ್ರಶ್ನೆಯಾವದೆಂದರೆ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಎಡ ಪ್ರಜಾಪ್ರಭುತ್ವ ರಂಗ.

ಅಂತೂ ಪ್ರಭುತ್ವ ಕಳೆದುಕೊಂಡರೆ ನೀರಿಲ್ಲದ ಭಾವಿಗೆ ಜಿಗಿದಾಂಗೆ. ಆ ಕಾರಣದಿಂದಲೇ ವಿರೋಧಿಗಳ ವಿರುದ್ಧ ಅಮ್ಮಾವ್ರ ಆರ್ಭಟ. "ಚಿಂತೆ ಯಾತಕೋ ಮನುಜಾ, ಭ್ರಾಂತಿ ಯಾತಕೋ" ಎಂದು ಪುರಂದರದಾಸರು ಹಾಡಿದ್ದರಂತೆ. ಪ್ರಭುತ್ವ ಉಳಿಸಿಕೊಳ್ಳಲೆಂದು ಅಮ್ಮಾವ್ರು ಉತ್ತರಿಸಿದರಂತೆ. ಹೌದು. ನಿಜ. ಆದರೆ ನಮ್ಮ ಹಾಡೇ ಬೇರೆ ಅದೇನು ಗೊತ್ತೇ ? ಪ್ರಭುತ್ವ ಎಂದರೆ ಸಾರ್ವತ್ರಿಕ ಸಮಾನತೆ ಎಂಬ ಹಳೆಯ ಪೂರ್ವಕಲ್ಪನೆಯನ್ನೆಲ್ಲ ನಾವು ತಿರಸ್ಕರಿಸುವೆವು. ಅದು ಬರೀ ಮೋಸ. ಶೋಷಣೆ ಇರುವವರೆಗೆ ಸಮಾನತೆ ಸಾಧ್ಯವಿಲ್ಲ. ಪ್ರಭುತ್ವವೆಂದರೆ ಜನತಾ ಆಳ್ವಿಕೆಯೆಂಬ ಪುರಾಣವನ್ನು ನಂಬಿಕೊಂಡು, ಪ್ರಭುತ್ವವೆಂದು ಕರೆಯಲ್ಪಡುವ ಯಾವ ಯಂತ್ರದ ಮುಂದೆ ಕುರುಡು ನಂಬಿಕೆಯಿಂದುಂಟಾದ ಭಯದಿಂದ ಜನರು ತಲೆಬಾಗುತ್ತಿದ್ದರೋ ಆ ಯಂತ್ರವನ್ನು ಶ್ರಮಜೀವಿವರ್ಗ ಬದಿಗಿಡುತ್ತದೆ ಮತ್ತು ಅದೊಂದು ಬಂಡವಾಳಶಾಹಿ ಸುಳ್ಳೆಂದು ಘೋಷಿಸುತ್ತದೆ. ಬಂಡವಾಳದಾರರಿಗೆ ಈ ಯಂತ್ರವು ಇಲ್ಲದಂತೆ ಮಾಡಿ ಅದನ್ನು ಶ್ರಮಿಕವರ್ಗ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ. ಎಡ ಪ್ರಜಾಪ್ರಭುತ್ವರಂಗ ಆ ಗುರಿ ಸಾಧನೆಗೆ ದಾರಿ ಮಾಡಿಕೊಡುತ್ತದೆ.

ಭಲೇ ಹುಡುಗ– ಬೆನ್ನು ಚಪ್ಪರಿಕೆ

ಗುಂಡಣ್ಣನಿಗೆ "ಉತ್ತಮ ಕಾರ್ಯ ನಿರ್ವಹಣೆ"ಯ ಸರ್ಟಿಫಿಕೇಟ್ ಸಿಕ್ಕಿತು ಇಂದಿರಮ್ಮನಿಂದ. ಕುಲದೇವರು ಏಕ ವ್ಯಕ್ತಿ ಸರ್ವಾಧಿಕಾರದತ್ತ ಹೋಗುತ್ತಿರುವಾಗ, ಕರ್ನಾಟಕದಲ್ಲಿ ವಿರೋಧಿ ಪಕ್ಷದ ಎಂ. ಎಲ್. ಎ. ಗಳನ್ನೆಲ್ಲ ಒಂದಲ್ಲೊಂದು ಆಮಿಷ ತೋರಿಸಿ ತನ್ನ ಕಿಸೆಗೆ ಹಾಕಿಕೊಂಡು, ಬೆಳ್ಳಿಗಧಾಧಾರಿಯಾಗಿ ಭೀಮನಂತೆ ಮೆರೆಯುತ್ತಿರುವ ಗುಂಡೂರಾಯರನ್ನು ಮೆಚ್ಚದಿದ್ದರೆ ಹೇಗೆ. ಬೇರೆ ರಾಜ್ಯಗಳೊಡನೆ ಹೋಲಿಸಿದರೆ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆಂದೂ ಕೇರಳ ಮತ್ತು ಪಶ್ಚಿಮ ಬಂಗಾಲದಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದೆಂದೂ ಇಂದಿರಾ ಹೇಳಿರುವರು. 1981ರ ಒಂದೇ ವರ್ಷದಲ್ಲಿ ಕರ್ನಾಟಕದಲ್ಲಿ 54ಕ್ಕಿಂತಲೂ ಹೆಚ್ಚು ಜನ ಪೋಲೀಸರ ಗೋಳಿಬಾರಿಗೆ ತುತ್ತಾದರು, ಸರ್ಕಸ್ ದುರಂತದಲ್ಲಿ ನೂರಾರು ಮುದ್ದು ಮಕ್ಕಳು ಸುಟ್ಟು ಹೋದರು. ನೂರಾರು ಜನ ಸೆರೆ ಕಂಡಿದು ಅಸು ನೀಗಿದರು, ಕೆರೆಕಟ್ಟೆಗಳೊಡೆದು ಹಲವಾರು ಬಡಜೀವಿಗಳೂ, ಆಸ್ತಿ-ಮನೆ, ಹೊಲಗಳೆಲ್ಲ ನಾಶವಾದವು, ಚಿಮಣಿ ಎಣ್ಣೆ, ಅಕ್ಕಿ-ಗೋಧಿಗಾಗಿ ದಿವಸ ಗಂಟೆಕಟ್ಲೆ ಸಾಲಾಗಿ ನಿಲ್ಲುವುದು ತಪ್ಪಲಾರದಾಗಿದೆ. ಹಗಲು, ರಾತ್ರಿ ರಸ್ತೆ ಮೇಲೆ ದರೋಡೆ, ಮನೆಹೊಕ್ಕು ಕೊಲೆ ಮಾಡಿ ವಸ್ತುಗಳ ಅಪಹರಣ-ಇದೆಲ್ಲ ದಿನನಿತ್ಯದ ದೃಶ್ಯಗಳು. ಕೇರಳ-ಪ. ಬಂಗಾಲಗಳಲ್ಲಿ ಅಲ್ಲಿರುವ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿ ಸರಕಾರ ಅತ್ಯಾವಶ್ಯಕ ವಸ್ತುಗಳನ್ನು ಅಗ್ಗದರದ ಅಂಗಡಿಗಳ ಮೂಲಕ ಜನರಿಗೆ ಮಾರಾಟ ಮಾಡಿ. ಬೆಲೆ ಹೆಚ್ಚಿಸಿ ಮಾರುವ ಖದೀಮರಿಂದ ಗ್ರಾಹಕರನ್ನು ಬಚಾವ ಮಾಡಿತು. ಅಲ್ಲಿ ಹಗಲು ರಾತ್ರಿ ದರೋಡೆಗಳಿಲ್ಲ, ಕೊಲೆ ಸುಲಿಗೆಗಳಿಲ್ಲ, ಪೋಲೀಸ್ ಅತ್ಯಾಚಾರಗಳಿಲ್ಲ, ಭ್ರಷ್ಟಾಚಾರವಿಲ್ಲ. ಕಾರಣ ಕೇರಳ–ಪ. ಬಂಗಾಲಗಳಲ್ಲಿ ಆಡಳಿತ ಸರಿಯಿಲ್ಲ. ದೇಶದ ಪ್ರಧಾನ ಮಂತ್ರಿಯಾಗಿ ಇಂದಿರಾ ಗಾಂಧಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುವುದೆಂದರೆ ಪ. ಬಂಗಾಲ, ಕೇರಳ ಸರಕಾರಕ್ಕೂ, ಅಲ್ಲಿಯ ಜನತೆಗೂ ಪಕ್ಷಪಾತ ಮಾಡಿದಂತೆಯೇ, ಅಪಮಾನ ಮಾಡಿದಂತೆಯೇ ಸರಿ.

ಗರೀಬಿ ಹಟಾವೋ ಘೋಷಣೆ, 20 ಅಂಶಗಳ ಕಾರ್ಯಕ್ರಮಗಳೆಲ್ಲ ಜನರಿಗೆ ಮರುಳು ಬೂದಿ ಬಳಿಯುವ ಘೋಷಣೆಗಳಾಗಿದ್ದು, ತನ್ನ ಮಂತ ಪಾರಂಪರ್ಯ ಅಧಿಕಾರ, ತನ್ನ ಪಕ್ಷ, ತನ್ನ ವರ್ಗ-ಇವುಗಳನ್ನೆಲ್ಲ ಸಂರಕ್ಷಿಸಿಕೊಂಡು ಹೋಗುವುದೇ ರಾಜಕೀಯ ಧುರೀಣೆ ಇಂದಿರಾ ಗಾಂಧಿಯ ಮೂಲೋದ್ದೇಶ. ಆ ಕಾರಣದಿಂದಲೇ ತನ್ನ ಪಕ್ಷ ಸರಕಾರ ನಡೆಸುತ್ತಿರುವ ಬಿಹಾರಿನಲ್ಲಿ, ಉತ್ತರ ಪ್ರದೇಶದಲ್ಲಿ ದಿನನಿತ್ಯ ಹರಿಜನರ ಕೊಲೆಯಾಗುತ್ತಿದ್ದರೂ, ತನ್ನ ಪಾರ್ಟಿ ಲೋಕಸಭೆ ವಿಧಾನಸಭೆ ಸದಸ್ಯರು ಸುಲಿಗೆ, ದರೋಡೆ, ಚಿಕ್ಕ ಹೆಣ್ಣು ಮಕ್ಕಳ ಮಾನಭಂಗ, ಅತೀಯವಾದ ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ಪಕ್ಷದೊಳಗೇ ಗುಂಪುಗಾರಿಕೆ ಮೊದಲಾದ ಘಟನೆಗಳು ನಡೆಯುತ್ತಿದ್ದರೂ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕಗಳಲ್ಲಿ ಮಂತ್ರಿಗಳೇ ಭ್ರಷ್ಟಾಚಾರದ ಕೊಂಪೆಗಳಾಗಿದ್ದರೂ, ತಮ್ಮ ಪಕ್ಷದವರೇ, ಭ್ರಷ್ಟಾಚಾರ, ಲಂಚಗುಳಿತನ, ಅಧಿಕಾರದ ದುರುಪಯೋಗಗಳ ಕುರಿತು ಹಗಲೆಲ್ಲ ತಕರಾರುಗಳನ್ನು ಸಲ್ಲಿಸಿದರೂ ಕೂಡ, ತಮ್ಮ ವರ್ಗದ ಹಿತದೃಷ್ಟಿಯಿಂದ, ಯಾವುದನ್ನೂ ಕಿವಿಗೆ ಹಾಕಿಕೊಳ್ಳದೆ, ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುತ್ತಿರುವಂತೆ ತನ್ನ ದರ್ಬಾರನ್ನು ನಡೆಸುತ್ತಿದ್ದಾರೆ. ಯುವ ಕಾಂಗ್ರೆ ಸಮಾವೇಶ, ಇಂದಿರಾಗಾಂಧಿಯ ಸಂದರ್ಶನ ಗುಂಡೂರಾಯರಿಗೆ ಬಲ ತಂದುಕೊಟ್ಟಿದೆ. ಗುಂಡೂರಾಯರ 2 ವರ್ಷದ ಆಡಳಿತೆಯ ವೈಖರಿಯನ್ನು 2 ಗಂಟೆಗಳಲ್ಲೇ ಪರಾಮರ್ಶಿಸಿ ಉತ್ತಮ ಸರ್ಟಿಫಿಕೇಟು ನೀಡಿದ್ದಾರೆ. ಅವರ ಜೊತೆಯಲ್ಲೇ ಈಗಾಗಲೇ ಕೈಗೊಂಡಿರುವ ದೊಡ್ಡ ನೀರಾವರಿ ಯೋಜನೆಗಳನ್ನು ತೀವ್ರ ಪ್ರಾಧಾನ್ಯತೆಕೊಟ್ಟು ಮುಗಿಸಬೇಕೆಂದು ಹೇಳಿದ್ದಾರಲ್ಲದೆ, ಅವುಗಳಿಗೆ ಬೇಕಾದ ಆರ್ಥಿಕ ನೆರವಿನ ಕುರಿತು ಚಕಾರವೆತ್ತಲಿಲ್ಲ. ಅವರು ಬೆಂಗಳೂರು ಬಿಟ್ಟ 24 ಗಂಟೆಯೊಳಗಾಗಿಯೇ, ಇನ್ನೂ ಬೇಸಿಗೆಯ ಬಿಸಿ ಬೆಂಗಳೂರಿಗೆ ಬಾರದಿರುವಾಗಲೇ ಕೈಗಾರಿಕೆಗಳಿಗೆ ವಿದ್ಯುತ್ ಕಡಿತದ ದೇಣಿಗೆ ಕೊಡಮಾಡಲಾಯಿತು. ಕಾಳೀ ಯೋಜನೆಯನ್ನು ಪೂರ್ತಿಗೊಳಿಸಲು ಗಮನಕೊಡಬೇಕೆಂದು ಹೇಳಿದರೂ, ಈ ಮಹಾಯೋಜನೆ– ನೆನೆಗುದಿಗೆ ಬೀಳಲು ಕಾರಣವೇನೆಂಬುದನ್ನು ಒಳಹೊಕ್ಕು ಅರ್ಥಮಾಡಿಕೊಳ್ಳುವ ಪ್ರಯತ್ನ ನಡೆಯಲಿಲ್ಲ. ವಿಜಯನಗರ ಉಕ್ಕು ಕಾರ್ಖಾನೆಯ ಕುರಿತು ಅಭಿಪ್ರಾಯ ವ್ಯಕ್ತಮಾಡಲು ಹಿಂದೇಟು ಹಾಕಿದರು. ಸದ್ಯಕ್ಕಂತೂ ಚುನಾವಣೆಯ ಊಹಾಪೋಹ ಹಿಂದೇಟು ಹಾಕಿ ಮಂತ್ರಿ ಸ್ಥಾನ ಅಲಂಕರಿಸುವವರಾರು ಎಂಬುದರ ಕಡೆ ಜನರ ಗಮನ ಸೆಳೆಯುವ ತಂತ್ರ ನಡೆದಿದೆ. ಕರ್ನಾಟಕ ರಾಜ್ಯದ ಅಭಿವೃದ್ಧಿ ಹಾಗೆಯೇ ಉಳಿಯಿತು. ಮಂತ್ರಿಗಳ, ಮಂತ್ರಿಮಂಡಲದ ಅಭಿವೃದ್ಧಿಯಾಗಲಿದೆ. ಇದರ ಜೊತೆಯಲ್ಲೇ ಪಕ್ಷಾಂತರದ ಅಭಿವೃದ್ಧಿಯೂ ಆಗಲಿದೆ.

ಬೆಳಕು ಹರಿಯಿತು

[ಹಿಂದಿನ ಸಂಚಿಕೆಯಿಂದ]

ಆ ದಿನವೂ ಬಂತು. ಆಕೆಗೆ ಹದಿನಾಲ್ಕು ವಯಸ್ಸಾದಾಗ "ಇಚಕಾರಿ"ಯಲ್ಲಿ (ಶ್ರೀಮಂತರ ಅಂತಃಪುರ; ಬಡವರಲ್ಲಿ ಅಡುಗೆಯ ಮನೆ) ತಂದೆ ತಾಯಿ ಎಷ್ಟೋ ವೇಳೆ ಗುಸುಗುಸು ಮಾತನಾಡುತ್ತಿದ್ದರು; ಬೋಸಿಯಂತ್ ಹತ್ತಿರ ಬಂದಾಗ ಸುಮ್ಮನಾಗುತ್ತಿದ್ದರು. ಒಂದು ದಿನ ತಾಯಿ ಕೇಳುತ್ತಿದ್ದಳು:

"ಆಸ್ತಿಪಾಸ್ತಿ ಏನಾದರೂ ಇದೆಯೆ?"

"ಶ್ರೀಮಂತರಲ್ಲ; ಆದರೂ ತಕ್ಕಮಟ್ಟಿಗಿದೆ"

"ಸರಿ ಸರಿ, ಆಗಲಿ!"

ಅನಂತರ ಸಿದ್ಧತೆಗೆ ಆರಂಭ. ವರನ ಸಂಬಂಧಿಯೊಬ್ಬಳು, ಅವಳ ಜೊತೆ ಮುದುಕಿ ಇನ್ನೊಬ್ಬಳೊಡನೆ ಒಂದು ದಿನ ಬಂದು, ರೊಟ್ಟಿ ಮತ್ತು ಒಂದು ಜತೆ ಕರವಸ್ತ್ರಗಳ ಉಡುಗೊರೆಕೊಟ್ಟು, ಬೋಸಿಯಂತಳ ತಾಯಿಯೊಡನೆ ಮಾತನಾಡಿ ಹೋದಳು.

"ಒಬ್ಬ ಮುದಿಗೂಬೆ ಬರುತ್ತಾನೆ ನೋಡು ನಿನ್ನನ್ನು ಮದುವೆಯಾಗುವುದಕ್ಕೆ"! ಎಂದು ಅತ್ತಿಗೆ ಅಣಕಿಸುತ್ತಿದ್ದಳು. ಬೋಸಿಯಂತ್ ಮಾಡುತ್ತಿದ್ದುದು "ಯಾ ಅಲ್ಲಾ!" ಎಂದು ಮೂಕ ಪ್ರಾರ್ಥನೆ, ಅಷ್ಟೆ. ಮನ ತೆರೆದು ಮಾತನಾಡಿ ಹೃದಯದ ಭಾರವನ್ನು ಕಳೆಯಲು ಯಾವ ಆಪ್ತರೂ ಬಳಿಯಲ್ಲಿರಲಿಲ್ಲ.

ಊರಿನ 'ಇಮಾಮ' (ಧರ್ಮಾಧಿಕಾರಿ)ನೂ ಒಬ್ಬ ಮುದುಕನೂ ಹೆಂಗಸರು ಬಂದು ಹೋದ ಮೂರುದಿನಗಳ ಮೇಲೆ ಬೋಸಿಯಾಳ ತಂದೆಯನ್ನು ಕಾಣಲು ಬಂದರು.

"ಹೊಕಗಿದ್ದಾನೆ ಕಣೇ" ಎಂದಳು ಪಿಸು ಮಾತಿನಲ್ಲಿ ಅತ್ತಿಗೆ, ನೋಡಲು ಬೋಸಿಯಂತಿಗೆ ಆಸ್ಪದವಿರಲಿಲ್ಲ.

ಆದರೆ ಬಂದಿದ್ದ ಮುದುಕ ವರನ ಮಾವನಾಗಿದ್ದ. ದೀರ್ಘ ಚರ್ಚೆ ನಡೆದು ಹುಡುಗಿಯ ಬೆಲೆ ನಿರ್ಧರಿಸಿದರು. ಎರಡು ಟಗರು, ನೂರ ಅರವತ್ತು ರಾತಲು ಅಕ್ಕಿ, ಬೋಸಿಯಂತ್ ಆ ವರೆಗೆ ಕುಡಿದಿದ್ದ ಹಾಲಿಗೆ ಪ್ರತಿಯಾಗಿ ಒಂದು ದನ, ಎರಡು ಕತ್ತೆ ಹೊರೆ ಸೌದೆ ಮತ್ತು ಮೂರು ಹಾಡಿಗಳು–ಇಷ್ಟನ್ನು ಹುಡುಗಿಯ ತಂದೆಗೆ ಕೊಡಬೇಕೆಂದಾಯಿತು.... ತಾನು ನೋಡದೆ ಇದ್ದ ವರನಿಗೆ ವಧುವಿನ ತಾಯಿಯೂ ಉಡುಗೊರೆ ಕಳುಹಿಸಿದಳು.

ಮದುವೆಯ ದಿನ ಬಂತು. ವಧುವಿನ ಮನೆಯಲ್ಲಿ ಒಂದು ಕುರಿಯನ್ನು ಕೊಂದರು. ಮಾಂಸ ಅಂಗಳದಲ್ಲಿ ಬೇಯುತ್ತಿತ್ತು. ರಾಶಿರಾಶಿಯಾಗಿ [illegible] ಬಿದ್ದಿತ್ತು ತರಕಾರಿ; ಬೋಸಿಯಾ ಮಾತ್ರ "ಇಚಕಾರಿ"ಯಲ್ಲಿ ದುಃಖಿಸಿಯಾಗಿ ಅಳುತ್ತ ಕುಳಿತಿದ್ದಳು.

ಆದರೆ ಅಷ್ಟೆಲ್ಲ ಸಂಭ್ರಮಕ್ಕೆ ತಾನೊಬ್ಬಳೇ ಕಾರಣವೆಂದು ಸ್ವಲ್ಪ ಸಂತೋಷವೂ ಆಗಿತ್ತು ಆಕೆಗೆ.

ಮುಲ್ಲಾ ಬಂದರು. ನಡುಮನೆಯಲ್ಲಿ ಪ್ರಾರ್ಥನೆಗಳಾಗುತ್ತಿದ್ದವು. ಗಟ್ಟಿಯಾಗಿ ಮುಲ್ಲಾ ಕೂಗಿದರು: "ಬೋಸಿಯಂತ್, ಈ ಮನುಷ್ಯ ನಿನ್ನ ಗಂಡನೆಂದು ಒಪ್ಪುತ್ತೀಯಾ?"

ಮೂರುಬಾರಿ ಅದೇ ಪ್ರಶ್ನೆ. ಯಾವ ಮನುಷ್ಯ? ಏನು ಉತ್ತರ ಕೊಡಬೇಕು?"

"ಹಾಯ್ ಎನ್ನು ಮಗಳೆ" ಎಂದಳು ತಾಯಿ.

"ಹಾಯ್!" ಬಲು ಮೆಲ್ಲನೆ ಬಾಗಿಲು ಹಿಂಬದಿಯಿಂದ.

ದುಃಖದಿಂದಲ್ಲ! ಸಮ್ಮತಿ ಸೂಚನೆಯ ಪದ್ಧತಿ ಅದು.

ಕತ್ತಲಾದಾಗ ಹೆಂಗಳೆಯರು "ಅಂತಃಪುರ"ದಲ್ಲಿ ಜಮಖಾನೆಗಳನ್ನು ಹಾಸಿದರು; ಗಾದಿಗಳನ್ನಿರಿಸಿದರು. ಶುಭ್ರ ಕುಮಾಲು ಸುತ್ತಿದ್ದ ರೀವಿಯ ಯುವಕರಿಬ್ಬರು ಹೊದಿಕೆಯಿಂದ ಮುಚ್ಚಿದ ಒಬ್ಬನನ್ನು ಕರೆತಂದು ಹಾಸಿಗೆಯ ಮೇಲೆ ಕುಳ್ಳಿರಿಸಿದರು. ಅವಕುಂಠನದ ಹೆಂಗಸರೆಲ್ಲ ಕೋಣೆಯ ಮೂಲೆಯಲ್ಲಿ ಅವಿತುಕೊಂಡರು. ಮಹಾಕಾರ್ಯ ಮಾಡಿದವರಂತೆ ವರನನ್ನು ಅಲ್ಲಿಬಿಟ್ಟು ಗಂಡಸರು ಹಿಂತಿರುಗಿದರು." ಇನ್ನು ಹೋಗುತ್ತಿಯಲ್ಲೇ ನೀನು......ಮಂಕೆ ಯಂಬೇಡಮ್ಮಾ!" ಎಂದು ಅತ್ತಿಗೆ ಅತ್ತದೂ ಆಯಿತು. ಮುಂಜು ಉರಿಯುತ್ತಿತ್ತು. ಸಾಕಷ್ಟು ಎಣ್ಣೆ ಸುರಿದು ಬಾಗಿಲೆಳೆದುಕೊಂಡು ತಾಯಿಯೂ ಹೊರಟು ಹೋದಳು.

ಅಲ್ಲಿ ಕುಳಿತಿದ್ದ ಗಂಡ ಇನ್ನೇನು ಮಾಡಬೇಕು? ಎದೆ ಢವಢವನೆ ಹೊಡೆದುಕೊಳ್ಳುತ್ತಿತ್ತು. ಇಬ್ಬರೂ ಪರಸ್ಪರ ಸಮೀಪದಲ್ಲೆ ಕುಳಿತಿದ್ದರು. ಸ್ವಲ್ಪ ಅತ್ತಿತ್ತ ಸರಿಯಲು ಯಾರಿಗೂ ಧೈರ್ಯವಿಲ್ಲ. ಉಸಿರು ಬಿಡುವುದು ಸ್ತಿಮಿತಕ್ಕೆ ಬಂದಮೇಲೆ ವರ ಸ್ವಲ್ಪ ಹತ್ತಿರಕ್ಕೆ ಬಂದ. ಅವನ ಹೃದಯ ಹೊಯ್ದಾಡುತ್ತಿದ್ದುದು ಆಕೆಗೆ ಕೇಳಿಸುತ್ತಿತ್ತು. ಒಮ್ಮೆಲೇ ಹೆಂಡತಿಯ ಅವಕುಂಠನವನ್ನು ಸರಿಸಿಬಿಟ್ಟ. ರೋಮಾಂಚನವಾಯಿತು ಆಕೆಗೆ. ಕದಲಲಿಲ್ಲ, ತಲೆಯೆತ್ತಲಿಲ್ಲ. ಅವನೂ ತನ್ನ ಹೊದಿಕೆಯನ್ನು ತೆಗೆದ. ದೀರ್ಘ ಕಾಲದಂತೆ ಕಂಡವು ಆ ಕೆಲ ನಿಮಿಷಗಳು. ಒಮ್ಮೆ ಮೆಲ್ಲನೆ ಕಣ್ಣು ತೆರೆದು ಬೋಸಿಯಂತ್ ಗಂಡನನ್ನು ನೋಡಿದಳು. ಮುಗುಳ್ನಗುತ್ತ ಬೋಸಿಯಾಳನ್ನೇ ನೋಡುತ್ತಿದ್ದ ಅವನು ಅಪರಾಧಿಯಂತೆ ಕಣ್ಣು ತಿರುಗಿಸಿದ.

ಎಷ್ಟು ಕೋಮಲ–ಸುಂದರ! ನಿಜಕ್ಕೂ ಒಳ್ಳೆಯ ಹುಡುಗ. ತನಗಿಂತ ಸ್ವಲ್ಪ ದೊಡ್ಡವನಿರಬಹುದು, ಅಷ್ಟೆ. ಆನಂದದಿಂದ ಅಳಬೇಕೆಂದು ತೋರಿತು ಆಕೆಗೆ–ಆದರೆ ಧೈರ್ಯ ಬರಲಿಲ್ಲ.

ಮತ್ತೆ ನಾಲ್ಕು ಕಣ್ಣುಗಳೂ ಸಂಧಿಸಿದವು. ಹೆಂಡತಿ ಹೆದರಿಕೊಳ್ಳಬಾರದೆಂದು ಗಂಡ ಗಾದಿಯ ಮೇಲೊರಗಿ ಕಣ್ಣು ಮುಚ್ಚಿಕೊಂಡ. ಅಲ್ಲೆ ಜೊಂಪು ಹತ್ತಿತು. ಅವನನ್ನು ಮನದಣಿಯೆ ನೋಡಿ ಬೋಸಿಯಾಳೂ ಮಲಗಿಕೊಂಡಳು. ಒಡಹುಟ್ಟಿದವರಂತೆ ಅವರು ನಿದ್ರಿಸಿದರು. ಮುಂಜು ಉರಿಯುತ್ತಲೇ ಇತ್ತು.

ಬೋಸಿಯಂತ್ ಗಂಡ ಖಾಜಾನ ಜೊತೆಯಲ್ಲಿ ಅವನ ಮನೆಗೆ ಹೋದಳು. ಆರು ತಿಂಗಳು ಅವರು ಜೊತೆಯಾಗಿದ್ದರು. ಆಮೇಲೆ ಖಾಜಾ ಹತ್ತಿಯ ತೋಟದಲ್ಲಿ ದುಡಿಯಲು ಟಾಷ್ಕೆಂಟಿಗೆ ಹೊರಟುಹೋದ. ಮತ್ತಾರು ತಿಂಗಳಲ್ಲಿ ತೀರಿಕೊಂಡು ಬೋಸಿಯಾಳ ಜೀವನದ ಸರ್ವಸ್ವವಾಗಿದ್ದ ಆ ಒಡನಾಡಿ ಕಾಣದಾದ. ಹೀಗೆ ಒಂದೇ ಒಂದು ಪ್ರಬಲ ಆಘಾತ ಬೋಸಿಯಂತ್‌ಳನ್ನು ಮುರಿದು ಮುದುಡಿಬಿಟ್ಟಿತು. ಆಕೆ ತವರು ಮನೆಗೆ ಮರಳಿದಳು.

"ನೀನು ಬಂಜೆಯಾದಾಯಿತು. ನಿನ್ನ ಜೊತೆಯಾಗಿ ಬರಬೇಕಾಗಿದ್ದ ಜನ ಇನ್ನೂ ಇಲ್ಲವಲ್ಲ. ಏನು ಗಂಡನೋ–ಏನು ಮಾವನೋ! ಮಂತಕರು." ಎಂದು ಕೆಟ್ಟ ಮಾತುಗಳನ್ನಾಡಿದ ಅಣ್ಣ. ಅವನ ಮೂರನೆಯ ಮಗುವಿಗೆ ಕುಡಿಸಲು ಹಾಲಿರಲಿಲ್ಲ ಮನೆಯಲ್ಲಿ. ಹಿಟ್ಟಿನ ಕಾರ್ಖಾನೆಯಲ್ಲಿ ದುಡಿದುದುಡಿದು ಅವನು ಪಶುವಾಗಿದ್ದ.

"ಸುಮ್ಮನಿರೋ!" ಎಂದು ತಾಯಿ ಗದರಿಸಿದಳು.

"ನಾನೂ ಸಾಯಬಾರದಿತ್ತೆ"–ಎಂದುಕೊಂಡಳು ಬೋಸಿಯಾ.

ನಿರಂಜನ

ಹಾಗೆಯೇ, ಆ ಎಳೆಯ ದೇಹವನ್ನು ದುಃಖದ ದೊರಗು ಕಲ್ಲಿನ ಮೇಲೆ ತೇದು ಹೃದಯವನ್ನು ಕೊರಗಿಸಿ–ಸೊರಗಿಸಿದ ಒಂದು ವರ್ಷ ಕಳೆಯಿತು.

ರಷ್ಯದಲ್ಲಿ ಜನರೆದ್ದು ರಾಜನನ್ನು ಓಡಿಸಿದರಂತೆ. ಶ್ರೀಮಂತರನ್ನು ಮುಗಿಸಿ ಬಡವರು ತಮ್ಮ ಸರಕಾರ ಸ್ಥಾಪಿಸಿದರಂತೆ. ನೆತ್ತರ ಹೊಳೆ ಹರಿಯಿತಂತೆ–ಎಂದೆಲ್ಲ ಸುದ್ದಿಗಳು ಬರತೊಡಗಿದವು. ದೂರದ ಆ ಪರ್ವತ ಪ್ರದೇಶಕ್ಕೆ, ಹಳೆಯ ಹಳ್ಳಿಗೆ. ಕ್ರಾಂತಿ ಆರಂಭವಾಗಿ ಆಗಲೆ ಐದು ವರ್ಷವಾಗಿತ್ತೆಂದು ಆ ಜನರಿಗೆ ಗೊತ್ತಿರಲಿಲ್ಲ.

ದಿಗಿಲುಗೊಳಿಸುವ, ದೇಹದಲ್ಲಿ ನಡುಕ ಹುಟ್ಟಿಸುವ ಕತೆಗಳು ಅನುದಿನವೂ ಕೇಳಿಬಂದುವು. ಎದ್ದವರಿಗಿದಿರಾಗಿ ಶ್ರೀಮಂತ ಜನರೂ ಮರು ಕ್ರಾಂತಿ ಮಾಡುತ್ತಿದ್ದರಂತೆ. ಕಳ್ಳರ ತಂಡಗಳೆದ್ದು ಲೂಟಿ ಮಾಡುತ್ತಿದ್ದುವಂತೆ; ಸುತ್ತಲಿನ ಕಾಡುಗಳಲ್ಲಿ ಕೊಲೆಯಾಗುತ್ತಿತ್ತಂತೆ.

ಸುಂದರಿಯರಾದ ಹುಡುಗಿಯರಿಗೆ ಉಳಿಗಾಲವಿಲ್ಲ!

ಪುಂಡರೊಂದು ದಿನ ಬೋಸಿಯಂತಳ ಗ್ರಾಮಕ್ಕೆ ನಡುಹಗಲಲ್ಲೆ ಬಂದು, "ಕ್ರಾಂತಿಮಾಡುವ ಎದೆಗಾರಿಕೆ ಯಾರಿಗಿದೆ ಇಲ್ಲಿ"? ಎಂದು ಅಟ್ಟಹಾಸ ಮಾಡಿ, ಹಾದಿಯಲ್ಲಿದ್ದ ಕೆಲವರನ್ನು ಕಡಿದುಹಾಕಿದರು. ಕೊಲೆಯಾಗಿ ಮಲಗಿದ್ದವರಲ್ಲಿ ಬೋಸಿಯಾಳ ತಂದೆಯೊಬ್ಬ. ಆಕೆಯ ಮಾವ "ಚಾಯ್‌ಖಾನೆ"ಯಿಂದೋಡಿ ಬಂದು ಆ ದುಃಖದ ಸುದ್ದಿ ತಂದ. ಪ್ರಾಣ ಭಯದಿಂದ, ಯಾರೂ ಸ್ವರವೆತ್ತಿ ಅಳುವಂತೆ ಇರಲಿಲ್ಲ.

ಮಾವ ಹೇಳಿದ: "ಬೋಸಿಯಾಳನ್ನೂ ನನ್ನ ಮಗಳನ್ನೂ ಬೇರೆ ಊರಿಗೆ ಸಾಗಿಸಬೇಕು..."

ಆ ರಾತ್ರೆ ಹುಡುಗಿಯರಿಬ್ಬರನ್ನೂ ಒಂದೆಡೆ ತಂದು ಮುದುಕಿಯರಂತೆ ವೇಷಹಾಕಿದರು. ತಾಯಿಯೂ ಜೊತೆಯಲ್ಲಿ ಹೊರಟಳು. ನಡೆಯುತ್ತ ಎರಡು ರಾತ್ರೆ ಎರಡು ದಿನಗಳ ಹಾದಿಸಾಗಿ, ಕೊಕಾಂಡ ನಗರಕ್ಕೆ ಅವರು ಬಂದರು.

ಆ ದೊಡ್ಡ ಪಟ್ಟಣದಲ್ಲಿ ಎಲ್ಲಿಗೆ ಹೋಗಬೇಕು? "ಇಶಾನ" (ಧರ್ಮಗುರು)ನಲ್ಲಿಗೆ ಧಾವಿಸಿ ತಾಯಿ ರಕ್ಷಣೆ ಯಾಚಿಸಿದಳು. "ಈ ಹುಡುಗಿಯರು ನಿಮ್ಮಲ್ಲಿ ತೊತ್ತುಗಳಾಗಿರಲಿ" ಎಂದಳು. 'ಇಶಾನ್' ಆಕಾಶದತ್ತ ನೋಡುತ್ತ "ಮಾಂಸ ನಮ್ಮದು; ಎಲುಬು ನಿಮ್ಮದು" ಎಂದ. "ಜೀವಂತವಿರುವಾಗ ಅವರು ನನಗಾಗಿ ದುಡಿಯುವರು. ಸತ್ತ ಮೇಲೆ ನಿನ್ನವರಾಗುವರು" ಎಂದರ್ಥ. ತಾಯಿ ಊರಿಗೆ ಹಿಂತಿರುಗಿದಳು.

'ಇಶಾನ'ನ ಎಷ್ಟೋ ಮಂದಿ ಶಿಷ್ಯರು ತಿಂಡಿ–ಕಾಣಿಕೆಗಳನ್ನು ಹೊರೆ ಹೊರೆಯಾಗಿ ತರುತ್ತಿದ್ದರು. ದಿನ ತಪ್ಪದೆ ನಡೆಯುತ್ತಿತ್ತು ಹಬ್ಬ. ಆಳುಗಳಿಗೆಲ್ಲ ನಸುಕಿನಿಂದ ನಡುವಿರುಳಿನವರೆಗೆ ಬೇಯಿಸುವುದು–ಶುಚಿ ಮಾಡುವುದೇ ಕೆಲಸ. ಈ ಹುಡುಗಿಯರಿಗೆ ಸಂಬಳವಿರಲಿಲ್ಲ. 'ಇಶಾನ'ನ ಹಿರಿಯ ಹೆಂಡಿರಿಬ್ಬರು ತಾನು ಮೇಲು ತಾನು ಮೇಲೆಂದು ಓಡಿಸಿಯೋಡಿಸಿ ಹುಡುಗಿಯರನ್ನು ಹೊಡೆಯುತ್ತಿದ್ದರು. ರಾತ್ರೆ ಆ ಎಳೆಯರಿಬ್ಬರು ಪರಸ್ಪರರನ್ನು ಅಪ್ಪಿಕೊಂಡು ಅಳುತ್ತಳುತ್ತ ನಿದ್ದೆ ಹೋಗುತ್ತಿದ್ದರು.

ಬೋಸಿಯಂತಳನ್ನು ಪ್ರೀತಿಸಿದ್ದು 'ಇಶಾನ'ನ ಕಿರಿಯ ಹೆಂಡತಿ ಮಾತ್ರ. ಆಕೆಯಂತೂ ಬೋಸಿಯಾಳದೇ ಹರೆಯ. ಹದಿನಾರೊ ಹದಿನೇಳೋ. ಮುದುಕ ಗಂಡನ ಜೊತೆಯಲ್ಲಿ, ಹಿರಿಯ ಸವತಿಯರ ಅಧೀನದಲ್ಲಿ, ನರಕಯಾತನೆಯನ್ನು ಅನುಭವಿಸುತ್ತಿದ್ದಳು. ಎದೆ ನೋವು ಆರಂಭವಾಗಿ ಆಗಾಗ್ಗೆ ಅವಳು ರಕ್ತ ಕಾರುತ್ತಿದ್ದಳು.

ಒಂದು ದಿನ ಅಂತಃಪುರದ ಗೋಡೆಯನ್ನು ಭೇದಿಸಿ ಒಂದು ಸುದ್ದಿ ಬಂತು. ಕೆಲ ಹೆಂಗಸರು ಬುರುಕೆಯಿಲ್ಲದೆ ಏನನ್ನೋ ಹಾಡುತ್ತಾ ಬಾವುಟ ಹಿಡಿದು ಬೀದಿಯಲ್ಲಿ ಮೆರವಣಿಗೆ ಹೋದರಂತೆ! "ಸೂಳೆಯರು, ಮಾಟಗಾತಿಯರು"! ಎಂದು ಶಪಿಸಿದರು ವೃದ್ಧೆಯರೆಲ್ಲ. ಬೋಸಿಯಂತ್ ಚಕಿತಳಾದಳು. 'ಇಶಾನ'ನ ಕಿರಿಯ ಹೆಂಡತಿಯ ಕಣ್ಣುಗಳು ಕಾಣದ ಯಾವುದೋ ಆಸೆಯನ್ನು ವ್ಯಕ್ತಪಡಿಸುತ್ತಿದ್ದವು. ಎಲ್ಲರೂ ಉದ್ವಿಗ್ನರಾದರು. ಉದ್ವಿಗ್ನತೆಯ ಫಲವಾಗಿ ಕಿರಿಯ ಯಜಮಾನತಿ ಹೆಚ್ಚುಹೆಚ್ಚು ರಕ್ತ ಕಾರಿದಳು.

ಎಲ್ಲರೂ ಗಾಬರಿಯು. ತಬೀಬನು (ವೈದ್ಯ) ಬಂದ. "ರೋಗಿಗೆ ತಿಳಿಯದಂತೆ ಹಸರು ಕಪ್ಪೆಗಳ ಮಾಂಸವನ್ನು ಹುರಿದು ಏಳು ದಿನ ತಿನ್ನಿಸಿ" ಎಂದ. ಆದಿನ ಒಬ್ಬಳು ಮುದುಕಿ ಮತ್ತು ಬೋಸಿಯಾ ಕಪ್ಪೆ ಹಿಡಿಯಲು ಹೋದರು.

ಮರುದಿನ "ಇಬ್ಬರೇಕೆ? ನಾನೊಬ್ಬಳೇ ಹಿಡಿದು ತರಬಲ್ಲೆ" ಎಂದಳು ಬೋಸಿಯಂತ್.

ಕೆರೆಯ ಹಾದಿ ತಪ್ಪಿಸಿ ಯಾವುದೋ ಮಾರ್ಗಕ್ಕೆ ಅವಳು ಇಳಿದಳು. ಹೊಸ ಹಾಡಿನ ಧ್ವನಿ ಕೇಳಿಸಿತು. ನೂರಾರು ಕೋಕಿಲ ಕಂಠಗಳು. ಸ್ತಬ್ಧಳಾಗಿ ಒಂದೆಡೆ ನಿಂತು ಅವಕುಂಠನದೆಡೆಯಿಂದ ಬೋಸಿಯಂತ್ ನೋಡಿದಳು. ಹುಡುಗಿಯರದೊಂದು ಗುಂಪು ಕತ್ತಿ–ಸುತ್ತಿಗೆಯ ಹಿಡಿದು ನಡೆದು ಬರುತ್ತಿತ್ತು. ಅವರು "ಘೋಷ"ದಲ್ಲಿರಲಿಲ್ಲ. ಯುವತಿಯರ ಜತೆಯಲ್ಲಿ ಕೆಲ ವೃದ್ಧೆಯರೂ ಇದ್ದರು. "ಪರಂಜ ನಿರ್ನಾಮವಾಗಲಿ! ಮಧ್ಯ ಏಷ್ಯದ ಸ್ವತಂತ್ರ ಸ್ತ್ರೀ ಚಿರಕಾಲ ಬಾಳಲಿ!" ಎಂದು ಅವರು ಘೋಷಿಸುತ್ತಿದ್ದರು. ಅಷ್ಟು ಹೆಮ್ಮೆಯಿಂದ ಎದೆಯೆತ್ತಿ, ತಲೆಯೆತ್ತಿ ಅವರು ನಡೆಯುತ್ತಿದ್ದರಲ್ಲವೇ? ಅವರ ಜೊತೆಯಲ್ಲಿ ಅವಳ ಹಾಗೆಯೇ ಇರಬೇಕು; ಆ ಹಾಡನ್ನೇ ಹಾಡಬೇಕು; ಅದೇ ಬಾವುಟ ಹಿಡಿಯಬೇಕು ಎಂದು ತೋರುತ್ತಿತ್ತು ಹುಚ್ಚು ಹುಡುಗಿ ಬೋಸಿಯಾಳಿಗೆ. ಕಾಲುಗಳು ಕದಲಿದುವು. ಗುಂಪಿನ ಜತೆಯಲ್ಲೇ, ಅವಕುಂಠನವತಿಯಾಗಿಯೇ ಅವಳು ಸಾಗಿದಳು.

ಅಂತೂ ಮೆರವಣಿಗೆ ಕೊನೆಗೊಂಡಿತು. ತಂಪಾದ ನೆರಳು ಬೀರುತ್ತಿದ್ದ ಹಲ ಮರಗಳಡಿಯಲ್ಲಿ ಜಮಖಾನೆಗಳನ್ನು ಹಾಸಿ ಒಂದು ವೃತ್ತವನ್ನು ರಚಿಸಿ ಅವರು ಕುಳಿತುಕೊಂ

ಶರು: 'ಕೋಕ್ ಚಾಯ್' (ಹಸಿರು ಚಾ) ಕುಡಿದರು; ಸೇಬು ಹಣ್ಣು ತಿಂದರು; ಭಾಷಣಗಳಿಗೆ ಕಿವಿಗೊಟ್ಟರು. ಸುತ್ತಮುತ್ತಲೂ ಪರದೆ ಧರಿಸಿ ನಿಂತಿದ್ದ ಎಷ್ಟೋ ಹೆಂಗಸರಿಗೆ ಭಾಷಣ ಅರ್ಥವಾಗುತ್ತಿರಲಿಲ್ಲ. ಸುಮ್ಮನೆ ನೋಡುತ್ತ ಅವರು ನಿಂತಿದ್ದರು ಅಷ್ಟೆ.

"ನೀವೆಲ್ಲರೂ ಕಿತ್ತೊಗೆಯಿರಿ ಪರುಜವನ್ನು!" ಎಂದರು ಯಾರೋ. ಖೋಸಿಯತಳಿಗೆ ಧೈರ್ಯ ಬರಲಿಲ್ಲ. ಆದರೆ ಆಕೆ ಜನಾನಖಾನದ ಒಂದು ಮೂಲೆಯಲ್ಲಿ ಹುಡುಗಿಯೊಬ್ಬಳ ಪಕ್ಕದಲ್ಲಿ ಕುಳಿತಳು. ತನ್ನ 'ರಫೀಕ' (ಕಾಮ್ರೇಡ್) ಎಂಬ ಆ ಹುಡುಗಿ ಖೋಸಿಯಾಳಿಗೆ ಒಂದು ಸೇಬುಹಣ್ಣು ಕೊಟ್ಟಳು. ಖೋಸಿಯಾಳಿಗೆ ಸಂತೋಷವಾಯಿತು.

ಮಧ್ಯ ವಯಸ್ಸಿನ ಇಬ್ರಾಹಿಮೋವಾ, ಸಂಪ್ರದಾಯಗಳ ಫಲವಾಗಿ ಮಹಿಳೆಯರು ಪಡಬೇಕಾದ ಕಷ್ಟ; ಆರೈಕೆ ತಿಳಿಯದೆ ಹಸುಗೂಸುಗಳು ಸಾಯುವುದು; ಪರುಜದಿಂದಾಗುವ ಅನ್ಯಾಯ—ಎಲ್ಲವನ್ನೂ ವಿವರಿಸಿದಳು. ತಾಯಿ ಕರುಣಕತೆಯನ್ನು ಮಕ್ಕಳಿಗೆ ಹೇಳಿ "ಅಳಬೇಡಿ ಕಂದಮ್ಮಗಳಿರಾ!" ಎಂಬಂತೆ, ಸಭೆ ಮುಗಿದಾಗ ಖೋಸಿಯತ್ ಇಬ್ರಾಹಿಮೋವಳ ಬಳಿಗೆ ಹೋಗಿ, ಎದೆಯಲ್ಲಿ ಮೊಗವಿಟ್ಟು ಬಿಕ್ಕಿಬಿಕ್ಕಿ ಅತ್ತಳು- ಹೊಸ "ಮಗಳ"ನ್ನು ಕರೆದುಕೊಂಡು ಬಾಲಿಕಾ ಗೃಹಕ್ಕೆ ತಾಯಿ ನಡೆದಳು.

ನೆಲದ ಮೇಲೆ ನಡೆಯುತ್ತಿದ್ದಂತೆ ಭಾಸವಾಗಲಿಲ್ಲ ಆ ಹುಡುಗಿಗೆ. ಅಷ್ಟು ಹಗುರ-ಹಗುರವಾಗಿತ್ತು ಎಲ್ಲ. 'ಇಶಾನ'ನ ಅರಮನೆ-ಸೆರೆಮನೆ ಮರೆತು ಹೋದರೂ ಅತ್ತಿಗೆಯ ನೆನಪೇನೋ ಆಯಿತು. ಆದರೆ ಹೋಗಿ ಕರೆ ತರುವಂತಿರಲಿಲ್ಲ.

ಬಾಲಿಕಾ ಗೃಹದಲ್ಲಿ ಇಬ್ರಾಹಿಮೋವಾ ನಗುನಗುತ್ತ ಖೋಸಿಯತಳ ಅವಕುಂಠನವನ್ನೆತ್ತಿ ಒಗೆದುಬಿಟ್ಟಳು! ಚಳಿಗೆ ಸಿಕ್ಕಿ ತತ್ತರಿಸಿದವರಂತೆ ಆಯಿತು ಖೋಸಿಯತ್‌ಳಿಗೆ ಸ್ವಲ್ಪ ಹೊತ್ತು. ಆದರೆ ಅಲ್ಲಿ ಯಾರೂ ಗಂಡಸರಿರಲಿಲ್ಲ.

ಹೊಸಬಾಳು ತೊಡುವುದಕ್ಕೆ ಒಳ ಇಜಾರ; ಮೇಲೆ ಲಂಗ, ಕೂದಲನ್ನು ಅಂದವಾಗಿ ಬಾಬ್‌ಕ್ರಾಪ್ ಕತ್ತರಿಸಿದರು. ಕನ್ನಡಿಯೆದುರು ನೆಟ್ಟಗೆ ನಿಂತಾಗ ಹದಿನೇಳರ ಅಪರಿಚಿತ ಹುಡುಗಿ ಸ್ಫುರದ್ರೂಪಿಣಿ ಯಾವಳೋ ಕಂಡುಬಂದಳು! ಅಸ್ಪಷ್ಟ ಉದ್ಗಾರ ಖೋಸಿಯತಳ ತೆರೆದ ಬಾಯಿಯಿಂದ ಹೊರಟಿತು. ಇಬ್ರಾಹಿಮೋವಾ "ಗೊತ್ತಿದೆಯೇನೆ ನಿನಗೆ, ಕನ್ನಡಿಯಲ್ಲಿ ಕಾಣುವುದು ಯಾರಂತೆ ಹೇಳು!" ಎಂದು ನಗೆ ಮಾಡಿದಳು.

...ಸ್ವಚ್ಛವಾಗಿ ಸ್ನಾನದ ಮನೆಯಲ್ಲಿ ಮಿಂದು, ಶುಭ್ರವಾಗಿದ್ದ ಹಾಸಿಗೆಯ ಮೇಲೆ ಮಲಗಿ, ಕಣ್ಣು ಮುಚ್ಚಿಕೊಂಡು ಅಳುತ್ತ-ನೆನವರಿಸುತ್ತ "ಇದೆಲ್ಲ ಕನಸು" ಎಂದರಿದಾಯಿತು.

ಮರುದಿನದಿಂದಲೆ ಪಾಠ-ಅಕ್ಷರಾಭ್ಯಾಸ. ಓದುಬರಹ, ಗಣಿತ, ಭೂಗೋಲಶಾಸ್ತ್ರ. ಬಂಧಿಸಿಡಲ್ಪಟ್ಟಿದ್ದ ಮೇಧಾಶಕ್ತಿ ಹುಚ್ಚು ಹೊಳೆಯಾಗಿ ಹರಿಯಿತು. ದಿನಗಳು-ಮಾಸಗಳು, ಹೊಸ ಲೋಕದ ಸ್ವತಂತ್ರ ಕೋಗಿಲೆಗಳ ಸ್ವಚ್ಛಂದ ಕಲವರದಲ್ಲೆ, ಉರುಳಿ ಕಾಣದಾದುವು.

...ಆ ದಿನ ಖೋಸಿಯತ್ ತರಗತಿಯಲ್ಲಿ ನಾಯಿಕೆ. ಶಾಲೆ ಆರಂಭವಾಗುವುದಕ್ಕೆ ಮೊದಲೇ ಬಂದು ಆಕೆ ಕಸಗುಡಿಸಿ, ಶೃಂಗರಿಸುತ್ತಿದ್ದಳು. ಅವಸರವಸರವಾಗಿ ಯಾರೋ ಒಬ್ಬಳು ಘೋಷಾ ಧರಿಸಿ ಅಲ್ಲಿಗೆ ಬಂದಳು. ಒಬ್ಬ ಹುಡುಗನೂ ಅಂಜುತ್ತಂಜುತ್ತ ಆಕೆಯ ಸೀರೆಯಲ್ಲಿ ಮುಖ ಮರೆಸಿ ಬರುತ್ತಿದ್ದ.

"ಯಾರು ಬೇಕು?" ಎಂದಳು ಖೋಸಿಯತ್.

"ಇಲ್ಲಿ ಯಾರಾದರೂ ಗಂಡಸರಿದ್ದಾರೆಯೇ?" ಎಂದಿತು ಸ್ವರ, ಇಳಿದನಿಯಲ್ಲಿ.

ಖೋಸಿಯಾಳಿಗೆ ನಗು ಬಂತು. "ಇಲ್ಲವಲ್ಲ! ಒಂದು ಪಿಳ್ಳೆಯೂ ಇಲ್ಲಿಲ್ಲ."

ಆ ಹೆಂಗಸು ಅವಕುಂಠನ ತೆಗೆದಳು. "ಅಮ್ಮಾ!" ಎಂದು ಹರ್ಷೋದ್ಗಾರವೆತ್ತಿದಳು ಖೋಸಿಯತ್. "ಅಮ್ಮಾ!"

ಆ ಹೆಂಗಸು ಗಾಬರಿಯಾಗಿ ಹಿಂದೆ ಸರಿದಳು. ಹುಡುಗ ಪಿಳಿಪಿಳಿ ಕಣ್ಣು ಬಿಡುತ್ತಿದ್ದ.

ಬಲು ದೂರದ ಹಳ್ಳಿಯಿಂದ ತನ್ನ ತಾಯಿ ಬಂದಿದ್ದಳು. ಶಾಲೆಯ ಮುಖ್ಯಾಧ್ಯಾಪಿಕೆ ಹೇಳಿ ಕಳುಹಿಸಿದ್ದಿರಬಹುದು. ಆ ಹುಡುಗ ಹತ್ತು ವರುಷದ ತನ್ನ ತಮ್ಮ-ರಖಿನೂರ್!

"ಅಮ್ಮಾ! ಯಾಕೆ ಹಾಗೆ ನಿಂತಿದ್ದೀಯೇ? ಗುರುತು ಹತ್ತಲಿಲ್ಲವೇ? ನೋಡು-ನೋಡು, ನಾನು ಖೋಸಿಯಾ!"

ಖೋಸಿಯಾ? ಅಲ್ಲ, ತನ್ನ ಮಗಳು ಖೋಸಿಯತ್ ಎಂದಿಗೂ ಅಲ್ಲ! ಯಾವಳೋ ದುಷ್ಟೆ ಇರಬೇಕು...

...ಅಳುತ್ತ ಖೋಸಿಯತ್ ತಾಯನ್ನಪ್ಪಿಕೊಂಡಳು...ಆ ವೃದ್ಧೆಯ ಇಂಗಿತ ಕಣ್ಣುಗಳಿಂದಲೂ ನೀರು ಹರಿಯಿತು...ಮಂಜು ಕರಗಿತು...

ತಾಯಿ ಆ ದಿನ ಉಳಿದುಕೊಂಡು ಎಲ್ಲವನ್ನೂ ನೋಡಿದಳು. ಕನಸಿನ ರಾಜ್ಯದಲ್ಲಿದ್ದವನಂತೆ ತಮ್ಮ ರಖ್‌ನೂನ್, ಅಕ್ಕ ಏನು ಹೇಳಿದರೂ ಅರ್ಥಹೀನ ನಗುವನ್ನಷ್ಟೆ ಬೀರುತ್ತಿದ್ದ. ಮಗಳು ಓದಬಲ್ಲಳು. ಆ ಸಂಗಡಿಗರು, ಶಾಲೆಯ ಇಬ್ರಾಹಿಮೋವಾ-ಎಲ್ಲರೂ ಒಳ್ಳೆಯವರೇ... ಆಳು, ದಂಡಿಮೆಯು ಅಂತಃಪುರ, ಅಲ್ಲಿರಲಿಲ್ಲ. "ಇಲ್ಲ, ಇವರ ಜಗತ್ತು ಬೇರೆ-ನನ್ನದು ಬೇರೆ ಎಂದುಕೊಂಡು ತಾಯಿ ದೀರ್ಘ ನಿಟ್ಟುಸಿರು ಬಿಟ್ಟಳು.

ರಾತ್ರೆ ಹಾಸಿಗೆಯ ಮೇಲೆ ಮಲಗಲು ಆಕೆ ಒಪ್ಪಲಿಲ್ಲ. ನೆಲದಲ್ಲೆ ಬಟ್ಟೆ ಹಾಸಿ ತಾಯಿಮಕ್ಕಳಿಬ್ಬರೂ ಮಲಗಿದರು. ಮರುಕದ ಧ್ವನಿಯಲ್ಲಿ ತಾಯಿ ಹೇಳಿದಳು: "ನೀನು ಬದುಕಿದ್ದೆ ಎಂದು ಗೊತ್ತಿರಲಿಲ್ಲ. ಖೋಸಿಯಾ; 'ಇಶಾನ' ಒಬ್ಬ ಕೊರಮಜಿಯನ್ನು ಕೇಳಿದನಂತೆ. ಅವನು ಮಂತ್ರತಂತ್ರಗಳನ್ನು ಮಾಡಿ "ಒಬ್ಬ ದೊಡ್ಡ ಮನುಷ್ಯ, ಕಾಫರ, ಬೋಲ್ಶೆವಿ ಆ ಹುಡುಗಿಯನ್ನು ಹಿಡಿದು, ಕೆಡಿಸಿ, ಕೊಂದು, ಒಂದು ಕೆರೆಗೆಸೆದ" ಎಂದನಂತೆ...

ಖೋಸಿಯಾ ನಕ್ಕಳು.

"ನೀನು ನಗುತ್ತೀ...ಹಳ್ಳಿಗೆ ಆ ಸುದ್ದಿ ಬಂದಾಗ ನಾವು ಪಟ್ಟ ದುಃಖ ಎಷ್ಟೋ ಆ ಅಲ್ಲಾನಿಗೆ ಗೊತ್ತು... ಖೋಸಿಯಾ! ಮನೆಗೆ ಬಂದುಬಿಡು ಮಗು...

"ಮನೆಗೆ? ಅಯ್ಯೋ ಉಂಟೆ ಅಮ್ಮಾ-?"

ತಾಯಿಗೆ ತಿಳಿಯಿತು, ಹಿಂದಿನದೇ ತುಂಟ ಹುಡುಗಿ...ತನಗಿಂತಲೂ ಎತ್ತರವಾಗಿ ದೃಢವಾಗಿ ಏಕೆ ಅವಳು ಬೆಳೆದಳು? ಚಿಕ್ಕ ಕೂಸಾಗಿರುತ್ತಿದ್ದರೆ ಮಡಿಲಲ್ಲಿ ಅಡಗಿಸಿ ಓಡಿಹೋಗಬಹುದಿತ್ತು.

ಮರುದಿನ ತಾಯಿ ಮತ್ತೊಮ್ಮೆ ಕೇಳಿದಳು, ಮಗಳು ಬರಲೊಪ್ಪಲಿಲ್ಲ...

ತನ್ನನ್ನೇ ತಾನು ಸಂತೈಸುವಂತೆ ತಾಯಿ, 'ಇರಬಹುದು ಖೋಸಿಯಾ ...ಈಗಿನ ಹುಡುಗಿಯರ ವಿಚಾರವೇ ಸರಿ ಇರಬಹುದು...ಆದರೆ ಇದೆಲ್ಲ ಆಗುವ ಮೊದಲೇ ಅಲ್ಲಾ ನನ್ನನ್ನು ಮುಗಿಸಬೇಕಾಗಿತ್ತು" ಎಂದಳು. ಮತ್ತೆ ಪುನಃ "ನೀನು ಅನ್ಯಾಯ ಮಾಡಿದೆ ಖೋಸಿಯಾ...ಒಳ್ಳೆಯ ಯಾವ ಮುಸ್ಲೀಮನ ಎದುರಲ್ಲೂ ನಾನಿನ್ನು ತಲೆ ಎತ್ತುವಂತಿಲ್ಲ. ನನ್ನ ಜೀವನ ಕಷ್ಟವಾಗುವುದು" ಎಂದು ಕಣ್ಣೀರಿಟ್ಟಳು.

ಭಾರವಾದ ಹೃದಯದಿಂದ ಮತ್ತಷ್ಟು ಬಾಗಿ, ತಾಯಿ ಕಿರಿಯ ಮಗನೊಡನೆ ಬಂದ ಹಾದಿಯಲ್ಲೆ ಹಿಂದೆ ಹೋದಳು.

...ಆ ಒಳ್ಳೆಯ ದೈವಭಕ್ತೆ ಅಲ್ಲಾನ ಚಿಂತನೆಯಲ್ಲೆ ಒಂದು ವರ್ಷದ ಮೇಲೆ ತೀರಿಕೊಂಡಳೆಂದು ಮಗಳಿಗೆ ಸುದ್ದಿ ಬಂತು...

ಬೆಳೆಯುತ್ತ ನಡೆದಳು ಖೋಸಿಯತ್. ಪೂರ್ಣ ಜೀವನದ ಗುರಿಯತ್ತ ವೇಗವಾಗಿ ಸಾಗುತ್ತಿತ್ತು ಅವಳ ದೋಣಿ. ಸಂಗಡಿಗ ನಾವಿಕನೊಬ್ಬ ನಿರಾಯಾಸವಾಗಿ ಆಕೆಗೆ ದೊರೆತ.

...ರಾತ್ರೆ, ರೈಲು ನಿಲ್ದಾಣದತ್ತ ಅವರಿಬ್ಬರೂ ನಡೆದಿದ್ದರು-ತರುಣ ಫೈಜಲ್, ಜೊತೆಯಲ್ಲೆ ಇಪ್ಪತ್ತರ ಖೋಸಿಯಾ ಇಬ್ಬರ ಕೈಯಲ್ಲೂ ಒಂದೊಂದು ಟ್ರಂಕಿತ್ತು. ಕೊಕಾಂಡದ ಶೀತಲ ಗಾಳಿ ಅವರಿಗಿದಿರಾಗಿ ಬೀಸುತ್ತಿತ್ತು. ಇಬ್ಬರೂ ಮುಂದೆ ಸಾಗಿದರು.

ರೈಲು ಹೊರಟು ನಿಂತಿತ್ತು ಟಾಷ್ಕೆಂಟಿಗೆ ಹೋಗುವುದಕ್ಕೆ. ಖೋಸಿಯತ್ ಕೂಡ ಟಾಷ್ಕೆಂಟಿಗೆ ಹೋಗುವಳು. ನಾಲ್ಕು ವರ್ಷಗಳ ಪ್ರೌಢ ವಿದ್ಯಾಭ್ಯಾಸಕ್ಕಾಗಿ...ಆಕೆ ಒಳಗೆ ಕುಳಿತುಕೊಂಡಳು. ಫೈಜಲ್ ಕಿಟಕಿ ಬಳಿ ನಿಂತ.

ಹಸುರು-ಕೆಂಪು ಲಾಟಾನಿನೊಡನೆ ಗಾರ್ಡ್ ಅತ್ತ ಬಂದಾಗ ಖೋಸಿಯಾ "ಟೊವಾರಿಕ್ (ಕಾಮ್ರೇಡ್), ಈ ಸೋವಿಯಟ್ ರೈಲು ಯಾವಾಗ ಹೊರಟೀತು?" ಎಂದಳು ರಾಗವಾಗಿ.

ಮುದುಕ ಗಾರ್ಡಿಗೆ ನಗು ಬಂತು." "ಯಾವಾಗ ಎನ್ನಲಿ ಮಗಳೆ. ಹತ್ತೂವರೆ ಹೊರಡಬೇಕಾದ ಹೊತ್ತು, ಹನ್ನೆರಡಕ್ಕಾದರೂ ಸ್ಟೇಶನ್ ಬಿಡಬೇಕು ತಾನೆ...ಹೊಸ ಲೈನಿನಲ್ಲಿ ಯಾಕೆ ಈ ಮುರುಕಲು ಗಾಡಿ ಹಾಕಿದ್ದಾರೆಯೊ! ಸ್ಟಾಲಿನಿಗೆ ಬರೆಯಬೇಕೆಂದಿದ್ದೇನೆ." ಖೋಸಿಯತಳ ಜತೆಯಲ್ಲಿ ಫೈಜಲ್ ಕೂಡ ನಕ್ಕ. "ಇಲ್ಲ ಮಾವ, ಮೊದಲ ಪಂಚವಾರ್ಷಿಕ ಯೋಜನೆ ಒಮ್ಮೆ ಶುರುವಾಗಿ ಮುಕ್ತಾಯವಾಗಲಿ. ಮತ್ತೆ ನೋಡಂತೆ. ಹೊಸ-ವೇಗದ-ರೈಲು ಬರುತ್ತದೆ" ಎಂದ.

ಮುದುಕ ಹೇಳಿದ "ಬಂದೀತು-ನಮ್ಮ ಜನ ಏನನ್ನೂ ಮಾಡಬಲ್ಲರು...ನಾನೂ ಅಷ್ಟರವರೆಗೆ ಜೀವಂತನಾಗಿರಲು ಪ್ರಯತ್ನಮಾಡುತ್ತೇನೆ... ನೀವೂ ಒಮ್ಮೆ ಅದೇ ರೈಲಿನಲ್ಲಿ ಬನ್ನಿ-ನಿಮ್ಮ ಮಗನೊಡನೆ!"

"ಇಲ್ಲವಪ್ಪ ಇಲ್ಲ" ಎಂದಳು ಖೋಸಿಯಾ. ಫೈಜಲ್ ನಗುತ್ತ "ಮಗುವಿನ ವಿಚಾರ ಇನ್ನೂ ಇಲ್ಲ. ಖೋಸಿಯಾ ಟಾಷ್ಕೆಂಟಿಗೆ ಕಲಿಯಲು ಹೋಗುತ್ತಿದ್ದಾಳೆ" ಎಂದ.

ಮುದುಕ ಏನೋ ಯೋಚನೆಗೆ ಬಿದ್ದವನಂತೆ "ಕಲಿಯುವುದು-ಕಲಿಯುವುದು, ಎಲ್ಲರೂ ಕಲಿಯುತ್ತಿದ್ದಾರೆ ಈಗ. ವಯಸ್ಸಾಯಿತು...ಇಲ್ಲದಿದ್ದರೆ ನಾನೂ ಕಲಿಯುತ್ತಿದ್ದೆ...ಆದರೆ ಈ ಹೊಸ ಯುಗದಲ್ಲಿ ಬದುಕುವ ಭಾಗ್ಯವಾದರೂ ಇದೆಯಲ್ಲ. ನನ್ನ ತಮ್ಮ ಗ್ರಿಗರಿಗೆ ಅದೂ ಇರಲಿಲ್ಲ... ಸ್ಟಾಲಿನ್ಸ್ಕ್ ರೇಲ್ವೆ ಮುಷ್ಕರದಲ್ಲಿ ಹತ್ತು ವರ್ಷಗಳ ಹಿಂದೆಯೇ ಅವನು ಗುಂಡು ತಗುಲಿ ಸತ್ತುಹೋದ" ಎಂದ. ದಂಪತಿಗಳು ಕಿವಿಗೊಟ್ಟು ಕೇಳುತ್ತಿದ್ದರದನ್ನು.

ಗಾರ್ಡ್ ಪ್ರಶ್ನಿಸಿದ: "ನಾವು ಯುಕ್ರೇನಿನವ, ಕ್ರಿಶ್ಚಿಯನ್...ನೀವು ಮುಸಲ್ಮಾನರೇ?"

"ಹೌದು"

"ನಾನು ಮುದುಕ...ಕುತೂಹಲದಿಂದ ಕೇಳಿದೆ. ಕೋಪಮಾಡಬೇಡಿ."

"ಕೋಪವೇಕೆ ಮಾವ? ನಾವೆಲ್ಲ ಸೋವಿಯೆತ್ ಜನಾಂಗದವರಲ್ಲವೇ?"

...ಗಾರ್ಡ್ ಒತ್ತಾಯಿಸಿದ, ಅವರಿಬ್ಬರೂ ತನ್ನ ಜೊತೆಯಲ್ಲಿ ಚಾ ಕುಡಿಯಬೇಕೆಂದು. ಕಿರಿಯರು ನಿರಾಕರಿಸಲಿಲ್ಲ.

ಮಧ್ಯರಾತ್ರೆ ಕಳೆದು ಒಂದು ಘಂಟೆಗೆ ರೈಲು ಹೊರಟಿತು. ಮುಂದಿನ ರಜೆಯವರೆಗೆ" ಫೈಜಲ್-ಖೋಸಿಯತ್ ಪರಸ್ಪರ ಬೀಳ್ಕೊಟ್ಟರು.

ಬಲು ನಿಧಾನವಾಗಿ ತೂಕಡಿಸುತ್ತ-ಆಕಳಿಸುತ್ತ ಗುಡ್ಡಕಾಡುಗಳಲ್ಲಿ ಏರಿ ಇಳಿದು ರೈಲು ಸಾಗಿತು.

...ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಖಾಜಾನೊಡನೆ ಮದುವೆ ...ಆ ಮೊದಲ ರಾತ್ರೆ...ಆರು ತಿಂಗಳ ಬಳಿಕ...ಖಾಜಾ ತಾಷ್ಕೆಂಟಿಗೆ ದಂಡಿಯಲು ಹೋಗಿ ತೀರಿಕೊಂಡ... ಅದೇ ತಾಷ್ಕೆಂಟಿಗೆ ತಾನು ಕಲಿಯಲು ಹೋಗುತ್ತಿದ್ದಾಳೆ....

ಹಳೆಯ ಅಧ್ಯಾಯ ಅದು. ಪ್ರತಿಯೊಂದು ಹೊಸದಿನದ ಉದಯವಾದಾಗಲೂ ಆ ಸ್ಮರಣೆ ಹಿಂದೆ-ಹಿಂದೆ ಸರಿಯುತ್ತಿತ್ತು; ಗತ ಜೀವನ ಮರೆಯುತ್ತಿತ್ತು.

ಒಂದು ರಾತ್ರೆ, ಒಂದು ಹಗಲು, ಮತ್ತೊಂದು ರಾತ್ರೆ-ಅಷ್ಟು ಪ್ರಯಾಣ ತಾಷ್ಕೆಂಟ್ ಕಣ್ಣಿಗೆ ಬಿದ್ದಾಗ ಬೆಳಕು ಸರಿಯಾಗಿ ಹರಿದಿತ್ತು.

●

ಪದಾಧಿಕಾರಿಗಳ ಆಯ್ಕೆ

31-12-81ರಂದು ಮೈಸೂರಲ್ಲಿ ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಸರ್ವಸದಸ್ಯರ ಸಭೆ ನಡೆದು ಮುಂದಿನ ವರ್ಷಕ್ಕೆ ಸಂಘದ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಕಾಂ. ಆರ್. ಮೋಹನ್‌ಕುಮಾರ್, ಉಪಾಧ್ಯಕ್ಷರಾಗಿ ಕಾಂ. ಎಂ. ಶೇಖರ, ಪ್ರಧಾನಕಾರ್ಯದರ್ಶಿಯಾಗಿ ಕಾಂ. ಕೆ. ಎ. ಪುಟ್ಟಪ್ಪ, ಸಹಕಾರ್ಯದರ್ಶಿಯಾಗಿ ಕಾಂ. ರಘುರಾಮು ಮತ್ತು ಖಜಾಂಚಿಯಾಗಿ ಕಾಂ. ತಿರುಮಲಾಚಾರ್ ಇವರುಗಳನ್ನು ಆಯ್ಕೆ ಮಾಡಲಾಯಿತು. ಅಲ್ಲದೆ ಹತ್ತು ಜನರುಳ್ಳ ಕಾರ್ಯಕಾರೀ ಸಮಿತಿ ಸದಸ್ಯರನ್ನೂ ಸಹ ಚುನಾಯಿಸಲಾಯಿತು.

ಹೋಟೆಲ್ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಕೂಡಲೇ ಪರಿಷ್ಕರಿಸಿ ಜಾರಿಗೆ ತರಬೇಕೆಂದು ಸರಕಾರವನ್ನು ಸಭೆ ಒತ್ತಾಯಿಸಿತು.

ಜ. 19ರ ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಲಾಯಿತು.

●

-ಕವಿ

ಕೋಪನ್ ಹೇಗನ್‌ದಿಂದ ಪ್ಯಾರೀಸ್‌ನವರೆಗೆ

ಯುರೋಪಿನ ಎಲ್ಲೆಡೆ ಶಾಂತಿ ಯಾತ್ರೆಗಳು

: ರೇಗನ್‌ರ ನ್ಯೂಟ್ರಾನ್ ಯುದ್ಧ ನೀತಿಗೆ ಧಿಕ್ಕಾರ!

ಕೊನೆಗಾಲವನ್ನು ಸಮೀಪಿಸುತ್ತಿರುವ ಬಂಡವಾಳಶಾಹೀ ವ್ಯವಸ್ಥೆ ಬಿಕ್ಕಟ್ಟಿನ ಪ್ರಪಾತಕ್ಕೆ ಇಳಿಯುತ್ತಿರುವಂತೆ ಅಮೇರಿಕಾದ ನೇತೃತ್ವದಲ್ಲಿನ ಸಾಮ್ರಾಜ್ಯಶಾಹೀ ಶಕ್ತಿಗಳ ರಾಕ್ಷಸೀ ಸ್ವರೂಪವನ್ನು ಮರೆಮಾಚಿದ್ದ ಮುಸುಕುಗಳು ಒಂದೊಂದಾಗಿ ಕಳಚಿಕೊಳ್ಳುತ್ತಿವೆ. ತಿಳಿದೋ ಅಥವಾ ತಿಳಿಯದೆಯೋ ಈ ಸಾಮ್ರಾಜ್ಯಶಾಹಿಗಳಿಗೆ ಪರೋಕ್ಷ ಬೆಂಬಲ ಕೊಡುತ್ತಿದ್ದ, ಅವರ ಅಪಪ್ರಚಾರಕ್ಕೆ ಬಲಿಯಾಗಿ ಸಾಮ್ರಾಜ್ಯಶಾಹೀ ಅಪಾಯದ ಬಗ್ಗೆ ಉದಾಸೀನರಾಗಿದ್ದ ಜನರೂ ಈಗ ಅವರ ಕರಾಳ ಸ್ವರೂಪ ಒಂದೊಂದಾಗಿ ಸ್ಪಷ್ಟವಾಗುತ್ತಿರುವಾಗ ಬೆಚ್ಚಿಬಿದ್ದಿದ್ದಾರೆ. ಒಂದು ಸಮಾಧಾನದ ವಿಷಯವೆಂದರೆ ಸಾಮ್ರಾಜ್ಯಶಾಹೀ ಅಪಾಯ ಜಗತ್ತನ್ನು ಹೆಚ್ಚೆಚ್ಚು ಆವರಿಸುತ್ತಿರುವಾಗ ಅದನ್ನು ಎದುರಿಸಿ ನಿಷ್ಕ್ರೀಯಗೊಳಿಸಬೇಕೆಂಬ ದೃಢ ನಿರ್ಧಾರದ ಭಾವವೂ ಜಗತ್ತಿನಾದ್ಯಂತ ಹರಡುತ್ತಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಹಾಗೂ ಅವರ ಹಿಂಬಾಲಕರು ತಮಗೆ ಸರಿಕಂಡದ್ದನ್ನು ಜಗತ್ತಿನ ಎಲ್ಲಾ ದೇಶಗಳು ಕಣ್ಣುಮುಚ್ಚಿ ಒಪ್ಪಲೇಬೇಕು ಹಾಗೂ ಜಗತ್ತಿನಾದ್ಯಂತ ತಮ್ಮ ಅಧಿಪತ್ಯ ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆ ಈಡೇರಿಸಲು ಸುಮಾರು ನಾಲ್ಕು ದಶಕಗಳಿಂದ ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ತೊಡಕಾಗಿ ಬಂದವರನ್ನು ಬೆದರಿಸಲು ಮಾರಕಾಸ್ತ್ರಗಳನ್ನು ಪೇರಿಸುತ್ತಾ ಹೋಗುತ್ತಿದ್ದಾರೆ. ಇದೇ ಪ್ರಕ್ರಿಯೆಯ ಅಂಗವಾಗಿಯೇ ಇತ್ತೀಚೆಗೆ ಭಯಾನಕ ನ್ಯೂಟ್ರಾನ್ ಬಾಂಬುಗಳನ್ನು ತಯಾರಿಸುವ ಹಾಗೂ ಪಶ್ಚಿಮ ಯುರೋಪಿನ ದೇಶಗಳಲ್ಲಿ ಪರ್ಶಿಂಗ್ 2 ಹಾಗೂ ಕ್ರೂಯಿಸ್ ಕ್ಷಿಪಣಿಗಳನ್ನು ನೆಲೆಗೊಳಿಸುವ ನಿರ್ಧಾರವನ್ನು ರೇಗನ್ ಹಾಗೂ ಅವರ ನಾಟೋ ಹಿಂಬಾಲಕರು ಕೈಗೊಂಡರು. ಈ ಕ್ಷಿಪಣಿಗಳ ಗುರಿ ಸೋವಿಯೆಟ್ ಒಕ್ಕೂಟ ಹಾಗೂ ಪೂರ್ವ ಯುರೋಪಿನ ಸಮಾಜವಾದೀ ದೇಶಗಳು.

ಇದುವರೆಗೆ 'ಸೋವಿಯೆಟ್ ಬೆದರಿಕೆ', 'ಕಮ್ಯುನಿಸಂನ ಅಪಾಯ'ದ ಅಪಪ್ರಚಾರಗಳ ಬಲದಿಂದ ತಮ್ಮ ಇಂತಹ ಮಾನವತಾ ವಿರೋಧೀ ಕಾರ್ಯಾಚರಣೆಗಳನ್ನು ಸಲೀಸಾಗಿ ಈ ಸಾಮ್ರಾಜ್ಯಶಾಹಿಗಳು ನಡೆಸಿಕೊಂಡು ಬಂದಿದ್ದರು. ದಶಕಗಳ ಸತತ ಅಪಪ್ರಚಾರದ ಫಲವಾಗಿ ಸಮಾಜವಾದೀ ವ್ಯವಸ್ಥೆ ಹಾಗೂ ಕಮ್ಯುನಿಸಂ ಬಗ್ಗೆ ಪೂರ್ವಾಗ್ರಹ ಪೀಡಿತ ಅಭಿಪ್ರಾಯಗಳನ್ನೇ ನಿಜವೆಂದು ನಂಬಿದ್ದ ಪಶ್ಚಿಮ ಯುರೋಪಿನ ಜನತೆ ಇದಕ್ಕೆ ವಿರೋಧ ವ್ಯಕ್ತಪಡಿಸಿರಲಿಲ್ಲ. ಆದರೆ ರೇಗನ್ ಹಾಗೂ ಅವರ ಹಿಂಬಾಲಕರ ನಿರೀಕ್ಷೆಗೆ ತದ್ವಿರುದ್ಧವಾಗಿ ಈಸಲ ಅಮೇರಿಕನ್ ಜನತೆ ಹಾಗೂ ಪಶ್ಚಿಮ ಯುರೋಪಿನ ದೇಶಗಳ ಜನತೆ ಸಾಮ್ರಾಜ್ಯಶಾಹಿಗಳ ಈ ನೆಪವನ್ನು ನಂಬಲು ಸಿದ್ಧರಾಗಲಿಲ್ಲ. ಎಲ್ಲಾ ಕಡೆಯಿಂದ ರೇಗನ್ ಹಾಗೂ ಅವರ ಈ ಯುದ್ಧಕೋರ ನೀತಿಗೆ ಕಟುವಿರೋಧ ಕಂಡುಬಂತು. ರೇಗನ್ ತಮ್ಮ ದೇಶದ ಜನರ ವಿರೋಧವನ್ನು ತಪ್ಪಿಸುವ ಸಲುವಾಗಿ ಮುಂಬರುವ ನ್ಯೂಕ್ಲಿಯರ್ ಯುದ್ಧ ಯುರೋಪಿಗಷ್ಟೇ ಸೀಮಿತವಾಗಿರುತ್ತದೆ. ಕೇವಲ ಪ್ರದರ್ಶಕ ಮಾತ್ರವಾಗಿ ನ್ಯೂಟ್ರಾನ್ ಬಾಂಬುಗಳನ್ನು ಉಪಯೋಗಿಸಲಾಗುತ್ತದೆ ಎಂದೆಲ್ಲಾ ಸಮಜಾಯಿಷಿ ಕೊಟ್ಟರು. ಆದರೆ ಈ ಸಮಜಾಯಿಷಿ ಅವರನ್ನು ಮತ್ತಷ್ಟು ಇಕ್ಕಟ್ಟಿನಲ್ಲಿ ಸಿಲುಕಿಸಿತು. ಅಮೇರಿಕನ್ನರು ತಮ್ಮ ಸ್ವಾರ್ಥಸಾಧನೆಗಾಗಿ ಯುರೋಪಿನ ದೇಶಗಳನ್ನು ಬಲಿಪಶುವಾಗಿ ಮಾಡುವುದರ ವಿರುದ್ಧ ಪಶ್ಚಿಮ ಯುರೋಪಿನಾದ್ಯಂತ ಬಲವಾದ ಪ್ರತಿಭಟನೆ ವ್ಯಕ್ತಪಡಿಸಲಾರಂಭಿಸಿತು. ಕಳೆದ ಜುಲೈ ತಿಂಗಳಿಂದ ಆರಂಭವಾದ ಈ ಶಾಂತಿ ಚಳವಳಿ ದಿನೇ ದಿನೇ ಪ್ರಬಲವಾಗುತ್ತಿದೆ. ಯುರೋಪಿನ ಜನರನ್ನು ಸಮಾಧಾನ ಪಡಿಸಲು "ಜನರಿಗೆ ಏನಾದರೂ ಆಗಲಿ, ನಿಮ್ಮ ಆಸ್ತಿಗಳಿಗೆ ಏನೂ ಅಪಾಯ ಒದಗದಂತೆ ಯುದ್ಧ ನಡೆಸುವ ಅಸ್ತ್ರ ನಮ್ಮಲ್ಲಿದೆ" ಎಂದು ನಂತರ ರೇಗನ್ ಹೇಳಲಾರಂಭಿಸಿದರು. ಆದರೆ ಶಾಂತಿ ಚಳುವಳಿ ಇಳಿಮುಖವಾಗುವ ಬದಲು ಮತ್ತಷ್ಟು ವ್ಯಾಪಕವಾಗುತ್ತಿದೆ.

ನ್ಯೂಟ್ರಾನ್ ಬಾಂಬ್ ಎಂದರೆ ಸರ್ವನಾಶ

ರೇಗನ್ ಹಾಗೂ ಅವರ ನಾಟೋ ಹಿಂಬಾಲಕರು ನ್ಯೂಟ್ರಾನ್ ಬಾಂಬುಗಳು ಹಾಗೂ ಇತರ ಅತ್ಯಾಧುನಿಕ ಮಾರಕಾಸ್ತ್ರಗಳ ಬಗ್ಗೆ ಹೇಳುತ್ತಿರುವ ಮಾತುಗಳಾದರೂ ನಿಜವೇ? ಅಲ್ಲ. ಅವು ಶುದ್ಧ ಸುಳ್ಳುಗಳ ದೊಡ್ಡ ಕಂತೆಗಳು. ನ್ಯೂಟ್ರಾನ್ ಬಾಂಬ್ ಜೀವಿಗಳನ್ನು ಕೊಲ್ಲುವ ಮಟ್ಟಿಗೆ ಹಿರೋಶಿಮಾದಲ್ಲಿ ಮಾನವತೆಯನ್ನು ನಡುಗಿಸಿದ ಅಣು ಬಾಂಬಿಗಿಂತ ಹಲವು ಪಟ್ಟು ಹೆಚ್ಚು ಮಾರಕ ಶಕ್ತಿ ಪಡೆದಿದೆ. ನಮ್ಮ ಪರಿಸರದ ಸಸ್ಯ ಸಂಪತ್ತನ್ನು ನಾಶಮಾಡುವುದರಲ್ಲೂ ಇದು ಹಲವು ಪಟ್ಟು ಹೆಚ್ಚು ಪ್ರಭಾವಶಾಲಿಯಾದ ಮಾರಕಾಸ್ತ್ರ. ಇವೆಲ್ಲಾ ನಾಶವಾದ ಮೇಲೂ ತಮ್ಮ ಆಸ್ತಿ-ಪಾಸ್ತಿ ಸುರಕ್ಷಿತವಾಗಿರುತ್ತದೆ ಎಂದು ಯುರೋಪಿನ ಆಸ್ತಿವಂತರು ಸಂತೋಷ ಪಡಬಹುದು. ಆದರೆ ಯುರೋಪಿನ ಸಾಮಾನ್ಯ ಜನತೆ ಇಂತಹ ಮೂರ್ಖರಲ್ಲ. ಅದೇ ರೀತಿ ಮುಂದೆ ಸಂಭವಿಸಬಹುದಾದ ನ್ಯೂಕ್ಲಿಯರ್ ಯುದ್ಧ ಕೇವಲ ಯುರೋಪಿಗೇ ಸೀಮಿತವಾಗಿರುತ್ತದೆ ಮತ್ತು ಇಂತಹ ಯುದ್ಧದಲ್ಲಿ ಗೆಲುವು ಸಾಧ್ಯ ಎಂಬುದು ಶತಮೂರ್ಖರು ಮಾತ್ರ ನಂಬಲು ಸಾಧ್ಯ. ಸ್ಫೋಟವಾದೊಡನೆ ಹರಡುವ ರೇಡಿಯೋ ವಿಕಿರಣ ಯುರೋಪಿನ ಗಡಿಯೊಳಗೇ ನಿಲ್ಲುವುದಿಲ್ಲ. ಜಗತ್ತಿನಾದ್ಯಂತ ಪಸರಿಸಿ ತನ್ನ ವಿನಾಶಲೀಲೆ ತೋರಿಸುತ್ತದೆ; ನ್ಯೂಕ್ಲಿಯರ್ ಯುದ್ಧ ಆರಂಭವಾದರೆ ಅದು ಅನಿವಾರ್ಯವೆಂಬಂತೆ ವಿಶ್ವವ್ಯಾಪೀ ರೂಪ ಪಡೆದೇ ತೀರುತ್ತದೆ. ಇದರಿಂದ ಅಮೇರಿಕನ್ನರೂ ಪಾರಾಗಲು ಸಾಧ್ಯವಿಲ್ಲ. ವಾಸ್ತವ ಸಂಗತಿಯೆಂದರೆ ಅಮೇರಿಕಾದ ಪೆಂಟಗಾನ್ ಸೈನಿಕವಲಯಗಳೇ ಲಕ್ಷಗಟ್ಟಲೆ ಅಮೇರಿಕನ್ನರ 'ಬಲಿದಾನ'ವಾಗಬಹುದೆಂದು ಅಂದಾಜು ಹಾಕಿವೆ. ಸೋವಿಯೆಟ್ ಅಧ್ಯಕ್ಷ ಬ್ರೆಜ್ನೇವ್ ಹೇಳಿರುವಂತೆ "ಯಾರು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದಾರೋ ಅವರು ಮಾತ್ರ ಇಂತಹ ಯುದ್ಧದಿಂದ ತಾವು ವಿಜೇತರಾಗಬಹುದೆಂಬ ನಿರೀಕ್ಷೆಯಿಂದ ನ್ಯೂಕ್ಲಿಯರ್ ಯುದ್ಧ ಆರಂಭಿಸಿಯಾರು" ನ್ಯೂಕ್ಲಿಯರ್ ಯುದ್ಧ ಪ್ರಾರಂಭವಾಯಿತೆಂದರೆ ಅದರಲ್ಲಿ ಯಾರೂ ಗೆಲ್ಲುವುದಿಲ್ಲ. ಎಲ್ಲರೂ ನಾಶಹೊಂದುತ್ತಾರಷ್ಟೆ. ಈ ಸತ್ಯವನ್ನು ರೇಗನ್ ಹಾಗೂ ಅವರ ಹಿಂಬಾಲಕರು ಸಾವಿರ ಸುಳ್ಳು ಹೇಳಿ ಮರೆಮಾಚಲು ಯತ್ನಿಸಿದರೂ ಅಮೇರಿಕನ್, ಯುರೋಪಿಯನ್ ಹಾಗೂ ಜಗತ್ತಿನ ಇನ್ಯಾವುದೇ ಭಾಗದ ಜನರನ್ನು ಇನ್ನು ಮುಂದೆಯೂ ಮಂಕಿಸುತ್ತಾ ಇರಲು ಸಾಧ್ಯವಿಲ್ಲ. ಅಮೇರಿಕಾ, ಯುರೋಪ್ ಹಾಗೂ ಜಗತ್ತಿನಾದ್ಯಂತ ಈಗ ಬಲವಾಗಿ ಬೀಸುತ್ತಿರುವ ನ್ಯೂಕ್ಲಿಯರ್ ಬಾಂಬ್ ವಿರೋಧಿ ಚಳುವಳಿಯ ಗಾಳಿ ಇದನ್ನೇ ಸಾರಿಹೇಳುತ್ತಿದೆ.

"ಬಾಂಬು ಬೇಡ, ಉದ್ಯೋಗ ಬೇಡ"

"ಶಾಂತಿಗಾಗಿ ಮಹಿಳೆಯರು" ಎಂಬ ಒಂದು ಸ್ಕ್ಯಾಂಡಿನೇವಿಯಾ ದೇಶದ ಸಂಘಟನೆಯ ಪ್ರೇರಣೆಯಿಂದ ಜೂನ್ 21ರಂದು ಕೋಪನ್‌ಹೇಗನ್‌ನಲ್ಲಿ ಈ ವರ್ಷದ ಜೂನ್ 21ರಂದು ಒಂದು ಜನತಾ ಶಾಂತಿಯಾತ್ರೆ ಆರಂಭವಾಯಿತು. ಈ ಶಾಂತಿಯಾತ್ರೆ ನೆದರ್‌ಲ್ಯಾಂಡ್, ಪಶ್ಚಿಮ ಜರ್ಮನಿ, ಬೆಲ್ಜಿಯಂಗಳ ದೇಶಗಳನ್ನು ಹಾಗೂ ಫ್ರಾನ್ಸ್ ಸೇರಿತು. ಆಗಸ್ಟ್ 6ರಂದು ಅಂದರೆ ಎರಡನೇ ಮಹಾಯುದ್ಧದಲ್ಲಿ ಹಿರೋಶಿಮಾದ ಮೇಲೆ ಅಮೇರಿಕಾದ ಬಾಂಬ್ ಸಿಡಿದ ದಿನದಂದು ಅದು ಪ್ಯಾರಿಸ್ ತಲುಪಿತು. ಈ ಶಾಂತಿಯಾತ್ರೆಯು ಉದ್ದಕ್ಕೂ ಜನ ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ ಭಾರೀ ಸಂಖ್ಯೆಯಲ್ಲಿ ಮುಷ್ಕರ ಪ್ರದರ್ಶನ ನಡೆಸಿದರು. ಇದನ್ನು ಈ ವರ್ಷದ ವಿಶಿಷ್ಟ ಶಾಂತಿ ಚಳುವಳಿಯ ಆರಂಭವೆನ್ನಬಹುದು. ಏಕೆಂದರೆ ಇದು ಅಲ್ಲಿಗೇ ನಿಲ್ಲದೆ ರೇಗನ್ ಹಾಗೂ ಅವರ ಹಿಂಬಾಲಕರ ಪ್ರತಿಯೊಂದು ಮೂರ್ಖ ಹೇಳಿಕೆಗೂ ಹೆಚ್ಚೆಚ್ಚು ತೀವ್ರವಾಗಿ ಪ್ರತಿಭಟನೆ ವ್ಯಕ್ತಪಡುತ್ತಾ ಬಂದಿದೆ. ಉದಾಹರಣೆಯಾಗಿ ಒಂದೆರಡು ಘಟನೆಗಳನ್ನು ಇಲ್ಲಿ ಉಲ್ಲೇಖಿಸಬಹುದು.

ರೇಗನ್ ತಮ್ಮ ಯುದ್ಧ ತಯಾರಿಗಾಗಿ ಮೀಸಲಿಟ್ಟ 222 ಕೋಟಿ ಡಾಲರುಗಳನ್ನು ಸರಿಹೊಂದಿಸಲು ತಮ್ಮ ಬಜೆಟ್‌ನಲ್ಲಿ ಸಾರ್ವಜನಿಕ ಸೌಲಭ್ಯಗಳಲ್ಲಿ 130 ಕೋಟಿ ಡಾಲರುಗಳಷ್ಟು ಕಡಿತಮಾಡಿದ್ದರ ಫಲವಾಗಿ ಹಾಗೂ ಅಲ್ಲಿನ ಗುತ್ತೇದಾರಿಗಳಿಗೆ ಇದಕ್ಕೂ ಹೆಚ್ಚು 'ತೆರಿಗೆ ಸುಧಾರಣೆ'ಯ ಮೂಲಕ ಕೊಡಮಾಡಿಸಿದ ಪರಿಣಾಮವಾಗಿ ಅಮೇರಿಕನ್ ಜನಸಾಮಾನ್ಯರು ತಮ್ಮ ಚರಿತ್ರೆಯಲ್ಲಿ ಹಿಂದೆಂದೂ ಕಾಣದಂತಹ ಭಯಾನಕ ಪ್ರಹಾರವನ್ನು ತಾವೇ ಆರಿಸಿಕಳಿಸಿದ ಸರಕಾರದಿಂದ ಎದುರಿಸಬೇಕಾಗಿ ಬಂತು. ಕೇವಲ ಕೆಲವು ಜನರ ಸಾಮ್ರಾಜ್ಯಶಾಹೀ ಆಕಾಂಕ್ಷೆಗಳಿಗಾಗಿ ಕೋಟಿಗಟ್ಟಲೆ ಜನ ಇಂತಹ ಸಂಕಷ್ಟಗಳನ್ನು ಸಹಿಸಬಾರದೆಂದು ನಿರ್ಧರಿಸಿದ ಅಮೇರಿಕಾದ ಜನತೆ ಸೆಪ್ಟೆಂಬರ್ 19ರಂದು ಅಲ್ಲಿನ ಕಾರ್ಮಿಕವರ್ಗದ ನೇತೃತ್ವದಲ್ಲಿ ದೇಶಾದ್ಯಂತ ತಮ್ಮ ಬಲವಾದ ಪ್ರತಿಭಟನೆಯನ್ನು ದಾಖಲುಗೊಳಿಸಿದರು. ವಾಶಿಂಗ್ಟನ್‌ನಲ್ಲಿ ಅಂದು ಸುಮಾರು ಐದು ಲಕ್ಷ ಜನ ಹಾಗೂ ಸಾನ್‌ಫ್ರಾನ್ಸಿಸ್ಕೋ, ಲಾಸ್ ಎಂಜಲೀಸ್, ಸಾನ್ ಡಿಯಾಗೋ, ಇತ್ಯಾದಿ ಕಡೆಗಳಲ್ಲೂ ಸಾವಿರಾರು ಜನ ಮೆರವಣಿಗೆ, ಮುಷ್ಕರ ಪ್ರದರ್ಶನ ನಡೆಸಿ ಯುದ್ಧಕೋರ ಹಾಗೂ ಜನವಿರೋಧೀ ಧೋರಣೆಗಳನ್ನು ಕೂಡಲೇ ಬದಲಿಸುವಂತೆ ತಮ್ಮ ಅಧ್ಯಕ್ಷ ರೇಗನ್‌ಗೆ ತೀವ್ರ ಎಚ್ಚರಿಕೆ ಕೊಟ್ಟರು.

ವಾಶಿಂಗ್ಟನ್‌ನಲ್ಲಿ ಆ ದಿನ ಕಂಡುಬಂದ ಜನತೆಯ ಅಪಾರ ಕ್ರೋಧ, ಬದ್ಧವಾಗಿ ಯಾವ ಅಹಿತಕರ ಘಟನೆಯೂ ಇಲ್ಲದೆ ಜಗತ್ತಿನ ಅಧಿಪತ್ಯದ ಕನಸು ಕಾಣುತ್ತಿರುವ ರೇಗನ್ ಆಡಳಿತಕ್ಕೆ ಒಡ್ಡಿದ ಸವಾಲು ಚಾರಿತ್ರಿಕವಾದದ್ದು. ಕಾರ್ಮಿಕ ಚಳುವಳಿಯ ವಿವಿಧ ದೇಶವ್ಯಾಪೀ ಸಂಘಟನೆಗಳು, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು ಸೇರಿ ನಡೆಸಿದ ಈ ಸಂಯುಕ್ತ ಮೆರವಣಿಗೆ ಹಾಗೂ ಮುಷ್ಕರ ಪ್ರದರ್ಶನ ಸಾಮ್ರಾಜ್ಯಶಾಹೀ ಪರ ಅಮೇರಿಕನ್ ದೊಡ್ಡ ಪತ್ರಿಕೆಗಳಿಂದಲೂ ಹೊಗಳಿಕೆ ಗಳಿಸಿತು. "ರೇಗನ್ ಉಪಯೋಗವಿಲ್ಲ, ಅವನನ್ನು ಹಾಲಿವುಡ್‌ಗೆ ವಾಪಾಸು ಕಳಿಸಿ", "ಸರಕಾರದ ಕೆಲಸ ಸೈನ್ಯ ಕಟ್ಟುವುದು, ವ್ಯಾಪಾರೀ ಸಂಸ್ಥೆಗಳನ್ನು ಪೋಷಿಸುವುದು ಮಾತ್ರವಲ್ಲ", "ಶ್ರೀಮಂತರಿಗಾಗಿ, ಶ್ರೀಮಂತರಿಂದ ಶ್ರೀಮಂತರ ಸರಕಾರವಾಗಿರುವ ರೇಗನ್ ಸರಕಾರಕ್ಕೆ ನಮ್ಮ ಧಿಕ್ಕಾರ", "ಗಗನ ಕುಸುಮ ತೋರಿಸಿ ಸದ್ಯ ಇರುವ ಅಲ್ಪಾಂಶವನ್ನೂ ತ್ಯಾಗಮಾಡಿ ಎಂದು ಬಡವರಿಗೆ ಹೇಳುವ ಸರಕಾರವನ್ನೂ ನಾವು ಸಂಪೂರ್ಣವಾಗಿ ಧಿಕ್ಕರಿಸಲು ಬಂದಿದ್ದೇವೆ" ಎಂಬಿತ್ಯಾದಿ ಪ್ರೇರಕ ಉದ್ಗಾರಗಳು ಈ ಸಭೆಗಳಲ್ಲಿ ಕೇಳಬಂದವು. ತಮ್ಮ ಯುದ್ಧಕೋರ ನೀತಿಯನ್ನು ಸಮರ್ಥಿಸಿಕೊಳ್ಳಲು ರೇಗನ್ ಕೊಡುತ್ತಿರುವ 'ಸೋವಿಯೆಟ್ ಅಪಾಯ' ಹಾಗೂ 'ಕಮ್ಯುನಿಸಂನ ಅಪಾಯ'ದ ನೆಪಗಳನ್ನು ಸಂಪೂರ್ಣವಾಗಿ ತಳ್ಳಿಹಾಕುತ್ತಾ ಒಬ್ಬ ಭಾಷಣಕಾರರು "ಎಲ್ಲಿ ಶೇಕಡಾ 51ಕ್ಕಿಂತ ಹೆಚ್ಚು ಅಲ್ಪಸಂಖ್ಯಾತರ ಯುವಕರಿಗೆ ಉದ್ಯೋಗ ಇಲ್ಲವೋ ಅದು ಸದ್ಯದ ಹಾಗೂ ಸ್ಪಷ್ಟವಾದ ಅಪಾಯ. ಅಧ್ಯಕ್ಷರೇ, ನಮ್ಮ ಸಮಾಜಕ್ಕೆ ಸಹಸ್ರ ಕೋಟಿ ಡಾಲರುಗಳನ್ನು ಮಿಲಿಟರಿಗಾಗಿ ಸುರಿಯುವ ತಾಕತ್ತಿದೆ. ಆದರೆ ನಮ್ಮ ದೇಶದ ಶಾಲಾಮಕ್ಕಳಿಗೆ ಒಂದು ಬಿಸಿ ಊಟ ಕೊಡಲು ಸಾಧ್ಯವಾಗುವುದಿಲ್ಲವೆಂದರೆ ಅಂಥಹ ಸಮಾಜ ಒಂದು ಸಾಮಾಜಿಕ ಡೈನಮೈಟ್‌ನೊಂದಿಗೆ ಆಟವಾಡುತ್ತಿದೆ... ಇದು ಈಗಿನ ವಾಸ್ತವ ಅಪಾಯ" ಎಂದು ಸಾರಿದರು. ಸೆಪ್ಟೆಂಬರ್ 19ರಂದು ಅಮೇರಿಕಾದ್ಯಂತ ನಡೆದ ಈ ಪ್ರತಿಭಟನೆ ರೇಗನ್ ಸರಕಾರದ ಪ್ರತಿಕ್ರಿಯಾವಾದೀ ಮಾನವತಾ ವಿರೋಧೀ, ಜನವಿರೋಧೀ ಧೋರಣೆಗಳನ್ನು ಅಮೇರಿಕನ್ ಜನತೆ ಒಕ್ಕೊರಲಿನಿಂದ ತಿರಸ್ಕರಿಸುತ್ತಿರುವುದರ ದ್ಯೋತಕ. ಅಂದರೆ ಜಗತ್ತಿನಾದ್ಯಂತ ತನ್ನ ಅಧಿಪತ್ಯ ನಡೆಸಬೇಕೆನ್ನುವ ರೇಗನ್ ತಮ್ಮ ದೇಶದಲ್ಲೇ ನೆಲೆ ಕಳೆಕೊಳ್ಳುತ್ತಿದ್ದಾರೆ. ತಮ್ಮ ದೇಶದ ಜನರಿಂದಲೇ ದೃಢ ನಕಾರ ಎದುರಿಸುತ್ತಿದ್ದಾರೆ.

[ಮುಂದುವರೆಯುವುದು]

ಮಾರ್ಕ್ಸ್‌ವಾದಿ ಸೌಂದರ್ಯಶಾಸ್ತ್ರ

(2ನೇ ಪುಟದಿಂದ)

ಗಮನ ಸೆಳೆಯುವುದು, ಈ ಕಾರಣಕ್ಕಾಗಿ. [ಹೆಚ್ಚಿನ ಅಭ್ಯಾಸ: ಸಾಕ್ಷಿ 38 ಕಾರಂತ ವಿಶೇಷಾಂಕದಲ್ಲಿ, 'ಕಮ್ಯುನಿಸ್ಟರು ಮತ್ತು ಕಾರಂತರು-' ಜಿ. ರಾಜಶೇಖರ]

ಕಲೆಯು ವಿರುದ್ಧ ಬೂರ್ಜ್ವಾ ಸಮಾಜದ ಶತ್ರುತ್ವ ಬೂರ್ಜ್ವಾ ಸಾಹಿತ್ಯದಲ್ಲಿ ಜನ್ಮಪಡೆಯುತ್ತದೆ. ಒಂದಿಲ್ಲೊಂದು ರೀತಿಯ ಬಂಡವಾಳಶಾಹಿ ಟೀಕೆ, ದುರಂತಾತ್ಮಕ ಬಡಿದಾಟಗಳಿಂದ ತುಂಬಿ ಬಂಡವಾಳಶಾಹಿ ಸತ್ಯಗಳು ನಿರೂಪಿಸಲ್ಪಡುವವು. ಇದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಲೆಯ ದ್ವಂದ್ವಾತ್ಮಕ ಬೆಳವಣಿಗೆಯ ಕ್ರಮವೆಂದು ಹೇಳುತ್ತಾರೆ ಮಾರ್ಕ್ಸ್ ಮತ್ತು ಏಂಗೆಲ್ಸ್. ಇದಕ್ಕಾಗಿ ಬೂರ್ಜ್ವಾ ಸಮಾಜದಲ್ಲಿ ಷೇಕ್ಸ್‌ಪಿಯರ್, ಗೋಥೆ, ಬಾಲ್ಜಾಕ್ ಮುಂತಾದ ಕಲೆಗಾರರು ತಮ್ಮ ಸಮಾಜದ ಶೋಷಣೆಯ ವಿರುದ್ಧ ಕಲಾತ್ಮಕ ಧ್ವನಿ ಎತ್ತಲು ಸಾಧ್ಯವಾಯ್ತೆಂದು ಅವರ ಅಭಿಪ್ರಾಯ.

ಜೀವನದ ನೈಜ ಚಿತ್ರಣಕೊಡಬಲ್ಲಂಥ, ತಮ್ಮ ವರ್ಗಸ್ವಭಾವ ಮೀರಿದ ಕಲೆಗಾರರು ಕೂಡ ಆಳುವ ವರ್ಗದ ಹಿತಾಸಕ್ತಿ, ವಿಚಾರಗಳ ಒತ್ತಡಕ್ಕೆ ಒಳಗಾದರು ಮತ್ತು ತಮ್ಮ ಕೃತಿಗಳಲ್ಲಿ ಇವುಗಳ ಬಗ್ಗೆ ರಿಯಾಯಿತಿ ತೋರಿಸಿದರು ಎಂದು ಮಾರ್ಕ್ಸ್, ಏಂಗೆಲ್ಸರು ಗುರುತಿಸಿ, ಇದಕ್ಕೆ ಸ್ಕೈಲರ್, ಗೋಥೆ, ಬಾಲ್ಜಾಕ್‌ರನ್ನು ಉದಹರಿಸುತ್ತಾರೆ.

ವರ್ಗಗಳ ಮಧ್ಯೆ ಸೈದ್ಧಾಂತಿಕ ಹೋರಾಟಕ್ಕೆ ಕಲೆ ಒಂದು ದೊಡ್ಡ ಅಸ್ತ್ರ. ಶೋಷಿತವರ್ಗದ ಪ್ರತಿಪಾದಕ ಕಲೆ, ಆಳುವವರ್ಗದ ಬುಡಕ್ಕೆ ನೀರು ತಿದ್ದಬಲ್ಲದು. ದುಡಿಯುವ ಜನವರ್ಗಕ್ಕೆ ಶಿಕ್ಷಣಕೊಟ್ಟು, ಬೆಳವಣಿಗೆಗೆ ಸಹಾಯಿಸಬಹುದು. ತಮ್ಮ ವರ್ಗವೈರಿಗಳ ವಿರುದ್ಧ ಹೋರಾಡ ಹಚ್ಚಿ ವಿಜಯದ ಸಮೀಪ ತರಬಹುದು. ಇಲ್ಲಿಲ್ಲ, ಬೆಲ್ಚಿ, ಪಂಚಮ, ನರಗುಂದ ರೈತಬಂಡಾಯ, ತಾಯಿ, ಸಿದ್ಧಲಿಂಗಯ್ಯನವರ ಹಾಡುಗಳು, ನೆನಪಿನಲ್ಲಿ ಅನಿವಾರ್ಯ ಸುಳಿದು ಬರುತ್ತವೆ.

ಫ್ಯೂಡಲ್ ಮತ್ತು ಬೂರ್ಜ್ವಾ ಸಂಸ್ಕೃತಿಯುಲ್ಲಿಯ ಪ್ರಗತಿಪರ ಮತ್ತು ಪ್ರತಿಗಾಮಿ ಸಂಗತಿಗಳ ಮಧ್ಯೆ ಸ್ಪಷ್ಟವಾದ ವ್ಯತ್ಯಾಸವನ್ನು ಗುರುತಿಸಬೇಕೆಂದು ಮಾರ್ಕ್ಸ್, ಏಂಗೆಲ್ಸ್ ಒತ್ತುಕೊಟ್ಟು ಹೇಳುತ್ತಾರೆ.

ಕಲೆಗೆ ಪಾರ್ಟಿಯ ತಾತ್ವಿಕ ದೃಷ್ಟಿಕೋನವನ್ನು ನಿರ್ದೇಶಿಸಬೇಕೆನ್ನುತ್ತಾನೆ ಮಾರ್ಕ್ಸ್. ಇವರಿಂದ ಕ್ರಾಂತಿಕಾರಿ ವರ್ಗದ ಸ್ಥಿತಿಗತಿಗನುಗುಣವಾಗಿ ಬೆಳೆಕಟ್ಟಲು ಸಾಧ್ಯವಾಗುತ್ತದೆ ಎಂದು ಅವನ ಅಭಿಪ್ರಾಯ.

ಕಲೆ ಮತ್ತು ವರ್ಗ ಹೋರಾಟಗಳ ಮಧ್ಯೆಸಂಬಂಧಕಲ್ಪಿಸುವಾಗ ಮಾರ್ಕ್ಸ್‌ವಾದಿಗಳು, ಈ ಸಮಸ್ಯೆಯನ್ನು ತಿರುಚುವವರ ವಿರುದ್ಧ ಎಚ್ಚರಿಸಿದರು. ವರ್ಗಗಳು ಸ್ಥಿರವಲ್ಲ. ಇತಿಹಾಸದಲ್ಲಿ ವರ್ಗದ ಒಳಸಂಬಂಧಗಳು ಬದಲಾಗುತ್ತ ಬಂದವು. ಸಮಾಜ ಜೀವನದಲ್ಲಿ ವರ್ಗಗಳ ಪಾತ್ರ ಸಂಕೀರ್ಣ ರೂಪಾಂತರಗಳಿಗೆ ಒಳಗಾಯಿತು. ಹೀಗಾದ್ದರಿಂದ ಫ್ಯೂಡಲ್ ಸಮಾಜದ ವಿರುದ್ಧ ಹೋರಾಡಿದ ಸಂದರ್ಭದ ಬೂರ್ಜ್ವಾಸಿಗೆ, ಅನೇಕ ಮಹತ್ವದ ಚೈತನ್ಯಾತ್ಮಕ ಮೌಲ್ಯಗಳನ್ನು ಹುಟ್ಟುಹಾಕಲಿಕ್ಕೆ ಸಾಧ್ಯವಾಯಿತು. ಫ್ಯೂಡಲ್ ವ್ಯವಸ್ಥೆ ವಿರುದ್ಧ ಹಟ್ಟಿಬಂದು, ಅಧಿಕಾರ ಹಿಡಿದುಕೊಂಡ ನಂತರ, ಇದೇ ಬೂರ್ಜ್ವಾಸಿಯು ತಾನೆ ಹುಟ್ಟುಹಾಕಿದ ಮೌಲ್ಯಗಳ ಅಸ್ತ್ರಗಳನ್ನು: ತನಗೆ ಮುಳುವಾಗತೊಡಗಿದ್ದರಿಂದ ನಿರಾಕರಿಸತೊಡಗಿತು. ಕೂಲಿಕಾರವರ್ಗ ರಂಗದಲ್ಲಿ ಕಾಣಿಸಿಕೊಂಡಾಗ, ಬೂರ್ಜ್ವಾಸಿಯು ಅಡ್ಡಿಗಳನ್ನು ತಂದೊಡ್ಡತೊಡಗಿತು.

ವಾಸ್ತವಿಕತೆ

ಕಲಾತ್ಮಕ ಅಭಿವ್ಯಕ್ತಿ ವಾಸ್ತವಿಕತೆಯನ್ನು ಪ್ರತಿಬಿಂಬಿಸುವ ಒಂದು ದಾರಿ; ಜತೆಗೆನೆ ಅದನ್ನು ಕ್ರೋಢೀಕರಿಸುವಂಥದು ಕೂಡ. ಮನುಷ್ಯನ ಚೈತನ್ಯಾತ್ಮಕ ಬೆಳವಣಿಗೆಯ ಮೇಲೆ ಆಳ ಪ್ರಭಾವ ಬೀರುವಂಥದು. ಸಮಾಜ ಪ್ರಗತಿಯಲ್ಲಿ, ಕಲೆಯ ಭೌತವಾದಿ ಮಹತ್ವಪೂರ್ಣ ಪಾತ್ರವನ್ನು ಹೀಗೆ ಗ್ರಹಿಸಬಹುದು.

ವಾಸ್ತವಿಕತೆ ಸಾಹಿತ್ಯದಲ್ಲಿ ಒಂದು ಅಲೆ; ಒಂದು ಪ್ರವೃತ್ತಿ. ಕಲಾತ್ಮಕ ಕ್ರಿಯಾಶೀಲತೆಗೆ ಒಂದು ಮಾದರಿ. ಜಗತ್ತಿನ ಸಾಹಿತ್ಯದಲ್ಲೇ ಇದು ಅತ್ಯುನ್ನತ ಸಾಧನೆ.

ಏಂಗೆಲ್ಸ್ 'ವಾಸ್ತವಿಕತೆ ಎಂದರೆ ವಿವರಗಳ ಸತ್ಯತೆ ಮಾತ್ರವಲ್ಲ, ವಿಶಿಷ್ಟ ಪರಿಸ್ಥಿತಿಯಲ್ಲಿ, ವಿಶಿಷ್ಟ ವ್ಯಕ್ತಿ ಸ್ವಭಾವಗಳ ನೈಜವಾದ ಪುನಃಸೃಷ್ಟಿ' ಎನ್ನುತ್ತಾನೆ. ವಾಸ್ತವಿಕತೆ ಇರುವಿಕೆಯ ಯಥಾವತ್ತಾದ ಪ್ರತಿಯಲ್ಲ. ಘಟನೆಗಳ ಅಂತರಾಳದ ಸತ್ತ್ವದಲ್ಲಿ ತೂರಿಕೊಂಡು ಹೋಗುವದೆಂದರ್ಥ. ನಿರ್ದಿಷ್ಟವಾದ ಕಾಲಘಟ್ಟದ ವಿಶಿಷ್ಟ ಲಕ್ಷಣಗಳನ್ನು ಹೊರಗೆಡವಬೇಕು. [ಹೋದಸಲ ಬಂಡಾಯ ಸಾಹಿತ್ಯ ಸಂಘಟನೆ ಏರ್ಪಡಿಸಿದ ಬೆಂಗಳೂರು ಶಿಬಿರದಲ್ಲಿ ಇ. ಎಂ. ಎಸ್. ನಂಬೂದ್ರಿಪಾದ್ ಅವರು ವಾಸ್ತವಿಕತೆಯ ಬಗ್ಗೆ ಒತ್ತುಕೊಟ್ಟು ಒಂದು ತಾಸು ಮಾಡಿದ್ದ ಭಾಷಣ ಕೇಳಿದ ಎಲ್ಲರನ್ನೂ ಮುಗ್ಧರನ್ನಾಗಿಸಿತ್ತು.] ವಾಸ್ತವಿಕತೆಯ ಭವ್ಯ ಬರಹಗಾರರೆಂದು ಮಾರ್ಕ್ಸ್, ಷೇಕ್ಸ್‌ಪಿಯರ್, ಬಾಲ್ಜಾಕ್, ಗೋಥೆ ಪುಷ್ಕಿನ್‌ರನ್ನು ಉದಾಹರಿಸುವರು.

ಉಪದೇಶಾತ್ಮಕ ಆಧ್ಯಾತ್ಮೀಕರಣವನ್ನೋ, ತಾತ್ವೀಕರಣವನ್ನೋ ನಿರಾಕರಿಸುತ್ತ ಮಾರ್ಕ್ಸ್ ಒದಗಿತ ಅಂತಃಪ್ರಜ್ಞೆಯನ್ನು ತಲುಪುವ ಕಲಾತ್ಮಕ ಅಭಿವ್ಯಕ್ತಿಯನ್ನು, ಸ್ಪಷ್ಟವಾದ ಸಂಕೇತಗಳನ್ನು ಕುರಿತು ಒತ್ತುಕೊಟ್ಟ. ಪ್ರಗತಿಶೀಲ ಜಾಗತಿಕ ದೃಷ್ಟಿಕೋನವನ್ನು ರಿಯಲಿಸ್ಟ್ ಕಲೆಗಾರರು ಹೊಂದಿರಬೇಕು. ಪ್ರಗತಿಶೀಲ ಸಾಹಿತ್ಯವೊಂದು ಆಳವಾಗಿ ಬೇರೂರಿದ ದೈನಂದಿನ ಮಹತ್ವದ ಪ್ರಕ್ರಿಯೆಗಳನ್ನು, ಸತ್ಯಪೂರ್ಣವಾಗಿ ಪ್ರತಿಬಿಂಬಿಸಬೇಕು. ಸಮಾಜದ ಪ್ರಗತಿಶೀಲ ಶಕ್ತಿಗಳ ಹಿತಾಸಕ್ತಿಯನ್ನು ಸಮರ್ಥಿಸುವಂತಿರಬೇಕು. ಅಂತೆ, ನಿರಂಜನ, ಪಾಬ್ಲೋ ನೆರೂದ ಮುಂತಾದವರು ನಮಗೆ ಪ್ರಸ್ತುತರಾಗುತ್ತಾರೆ.

[ಸಾಧಾರ]

[Marx and Engels : On Literature and Art.]

ತುಮಕೂರ್ ಬಂದ್‌ಗೆ ಕರೆ

ದಿನಾಂಕ 19-1-82 ರಂದು ದೇಶದಾದ್ಯಂತ ನಡೆಯುವ ಸಾರ್ವತ್ರಿಕ ಮುಷ್ಕರ ಮತ್ತು ಭಾರತ್ ಬಂದ್‌ನ ಅಂಗವಾಗಿ ತಾ: 12-1-82 ರಂದು ತುಮಕೂರು ಜಿಲ್ಲೆಯ ಎಲ್ಲಾ ವಿರೋಧ ಪಕ್ಷಗಳ ಕಾರ್ಮಿಕ ಸಂಘಗಳ ಮತ್ತು ನೌಕರರ ಸಂಘಗಳನ್ನೊಳಗೊಂಡ ಸಭೆಯು ಹಳೇ ಬಸ್‌ಸ್ಟಾಂಡ್‌ನ ಕಪಾಲಿ ಹೋಟೆಲ್‌ನ ಸಭಾಂಗಣದಲ್ಲಿ ಸಭೆಸೇರಿ ತುಮಕೂರು ಜಿಲ್ಲಾ ಬಂದ್ ಯಶಸ್ವಿಗೊಳಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಭೆಯಲ್ಲಿ ಜನತಾ ಪಕ್ಷ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತೀಯ ಜನತಾ ಪಕ್ಷ, ಕಾಂಗ್ರೆಸ್ (ಎಸ್), ಲೋಕದಳ, ಭಾರತೀಯ ಕಮ್ಯುನಿಸ್ಟ್ ಪಕ್ಷ, ಸರಕಾರಿ ನೌಕರರ ಸಂಘ, ಎಲ್. ಐ. ಸಿ. ನೌಕರರ ಸಂಘ, ಭಾರತೀಯ ವಿದ್ಯಾರ್ಥಿ ಪರಿಷತ್ತು, ಭಾರತೀಯ ವಿದ್ಯಾರ್ಥಿ ಫೆಡರೇಷನ್, ಪೋಸ್ಟ್ ನೌಕರರ ಸಂಘ ಮತ್ತಿತರ ವಿವಿಧ ಕಾರ್ಮಿಕ ಸಂಘಗಳು ಭಾಗವಹಿಸಿದ್ದವು. ಬಂದ್ ಯಶಸ್ವಿಗೊಳಿಸಲು 17 ವಿವಿಧ ಸಂಘಟನೆಯನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸಿ ಕಾಮ್ರೇಡ್ ಕೆ.ಆರ್. ನಾಯಕ್ ರವರನ್ನು ಸಂಚಾಲಕರನ್ನಾಗಿಯೂ, ಶ್ರೀ ಬಾಲಕೃಷ್ಣ ಪೈ ರವರನ್ನು ಖಜಾಂಚಿಗಳನ್ನಾಗಿಯೂ ಚುನಾಯಿಸಲಾಯಿತು.

ಸಾರ್ವತ್ರಿಕ ಮುಷ್ಕರಕ್ಕೆ ವಿದ್ಯಾರ್ಥಿ-ಯುವಜನ ವೇದಿಕೆಯ ಬೆಂಬಲ

ಜ. 19ರಂದು ನಡೆಯಲಿರುವ ಅಖಿಲಭಾರತ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿ ರಾಜ್ಯದ ವಿದ್ಯಾರ್ಥಿ-ಯುವಜನ ಸಂಘಟನೆಗಳು ಅಂದು ಒಂದು ದಿನದ ರಾಜ್ಯವ್ಯಾಪೀ ವಿದ್ಯಾರ್ಥಿ ಮುಷ್ಕರಕ್ಕೆ ಕರೆ ನೀಡಿವೆ.

ಜನವರಿ 4ರಂದು ಬೆಂಗಳೂರಿನಲ್ಲಿ ಎಸ್. ಎಫ್. ಐ., ಡಿ. ವೈ. ಎಫ್. ಐ., ಎ. ಐ. ಎಸ್. ಎಫ್., ಎ. ಐ. ವೈ. ಎಫ್., ಯುವ ಜನತಾ, ವಿದ್ಯಾರ್ಥಿ ಜನತಾ, ಯೂತ್ ಕಾಂಗ್ರೆಸ್ (ಎಸ್), ಎನ್. ಎಸ್. ಯು. ಐ. (ಎಸ್) ಮತ್ತು ಯುವ ಲೋಕದಳದ ಪ್ರತಿನಿಧಿಗಳು ಸಭೆ ಸೇರಿ ಜಂಟಿ ಕ್ರಿಯಾಸಮಿತಿಯೊಂದನ್ನು ರಚಿಸಲಾಗಿದೆ.

ಅಖಿಲಭಾರತ ಮಟ್ಟದಲ್ಲಿ ಡಿಸೆಂಬರ್ 13ರಂದು ದೆಹಲಿಯಲ್ಲಿ ಸಭೆ ಸೇರಿ ಜನವರಿ 19ರಂದು ನಡೆಯುವ ಮುಷ್ಕರಕ್ಕೆ ಸೌಹಾರ್ದ ಬೆಂಬಲವಾಗಿ ಒಂದು ದಿನದ ರಾಷ್ಟ್ರವ್ಯಾಪೀ ವಿದ್ಯಾರ್ಥಿ ಮುಷ್ಕರ ನಡೆಸುವ ಕರೆಯನ್ನು ಜಾರಿಗೊಳಿಸಲು ಜಂಟಿ ಕ್ರಿಯಾಸಮಿತಿ ತೀರ್ಮಾನಿಸಿದೆ.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಇದೇರೀತಿ ವಿದ್ಯಾರ್ಥಿ ಯುವಜನ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯನ್ನು ರಚಿಸಿ ಜನವರಿ 19ರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಎಸ್. ಎಫ್. ಐ. ರಾಜ್ಯ ಶಾಖೆ ಪ್ರಧಾನಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಮತ್ತು ಡಿ. ವೈ. ಎಫ್. ಐ. ರಾಜ್ಯಘಟಕದ ಪ್ರಧಾನಕಾರ್ಯದರ್ಶಿ ಕಾಂ. ಜಿ. ವಿ. ಶ್ರೀರಾಂರೆಡ್ಡಿ ಮನವಿಮಾಡಿದ್ದಾರೆ.

ದ.ಕ. ಜಿಲ್ಲಾ ಸಿ.ಐ.ಟಿ.ಯು. ಕರೆ

ಜ. 19ರ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಿ

ರಾಷ್ಟ್ರೀಯ ಆಂದೋಲನ ಸಮಿತಿಯ ಪರವಾಗಿ ಜ. 19 ರಂದು ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ನೀಡಿರುವ ಕರೆಯನ್ನು ಯಶಸ್ವಿಗೊಳಿಸಬೇಕೆಂದು ಸಿ. ಐ. ಟಿ. ಯು. ದ. ಕ. ಜಿಲ್ಲಾ ಸಮಿತಿ ಕರೆನೀಡಿದೆ.

ಡಿಸೆಂಬರ್ 27ರಂದು ದ. ಕ. ಜಿಲ್ಲಾ ಸಿ. ಐ. ಟಿ. ಯು. ಸಮಿತಿ ಮಂಗಳೂರಿನಲ್ಲಿ ಸಭೆ ಸೇರಿತ್ತು.

ಸಾರ್ವತ್ರಿಕ ಮುಷ್ಕರಕ್ಕೆ ಪೂರಕವಾಗಿ ಜ. 12ರಂದು ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ದ. ಕ. ಜಿಲ್ಲಾ ಟ್ರೇಡ್‌ಯೂನಿಯನ್ ಕೋ ಆರ್ಡಿನೇಷನ್ ಸಮಿತಿಯು ತೀರ್ಮಾನಿಸಿರುವುದನ್ನು ಸ್ವಾಗತಿಸಲಾಯಿತು. ಈ ಕಾರ್ಯಕ್ರಮ ಯಶಸ್ವಿಗೊಳಿಸುವಂತೆಯೂ ಸಿ. ಐ. ಟಿ. ಯು. ಸಮಿತಿ ಮನವಿಮಾಡಿದೆ.

ಡಿ.ವೈ.ಎಫ್.ಐ. ಸಭೆ

3-1-82 ರಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟ ಪ್ರವಾಸಿ ಮಂದಿರದ ಆವರಣದಲ್ಲಿ ಸ್ಥಳೀಯ ಡಿ. ವೈ. ಎಫ್. ಐ. ಘಟಕದ ಸರ್ವಸದಸ್ಯರ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಎನ್. ಮುನಿಯಪ್ಪನವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಡಿ. ವೈ. ಎಫ್. ಐ. ಕೋಲಾರ ಜಿಲ್ಲಾ ಘಟಕದ ಕಾರ್ಯದರ್ಶಿ ಕೆ. ವಿ. ಎಸ್. ಸ್ವಾಮಿ ಮಾತನಾಡಿದರು.

ಕೊನೆಯಲ್ಲಿ ಶಿಡ್ಲಘಟ್ಟ ಘಟಕಕ್ಕೆ ನೂತನ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಎಸ್. ಆರ್. ಶ್ರೀನಿವಾಸ್, ಉಪಾಧ್ಯಕ್ಷರಾಗಿ ಕೆ. ಎಂ. ಸ್ವಾಮಿ ಮತ್ತು ಶಾಮಣ್ಣ, ಪ್ರಧಾನ ಕಾರ್ಯದರ್ಶಿಯಾಗಿ ಎನ್. ಮುನಿಯಪ್ಪ. ಸಹಕಾರ್ಯದರ್ಶಿಗಳಾಗಿ ಕೆ. ಎಂ. ವೆಂಕಟೇಶ್ ಮತ್ತು ಎಸ್. ಮೋದಿನ್ ಆಯ್ಕೆಯಾದರು. ಅಲ್ಲದೇ 14 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಸಭೆಯು ಜ. 19 ರಂದು ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ತನ್ನ ಬೆಂಬಲ ವ್ಯಕ್ತಪಡಿಸಿತು.

ಬೀಡಿ ಕೆಲಸಗಾರರ ಸಭೆ

ದ.ಕ. ಜಿಲ್ಲೆಯ ಬಂಟ್ವಾಳ ತಾಲೂಕಿನ ಬಾಂಬಿಲ ಎಂಬಲ್ಲಿ 1-1-82 ರಂದು ಬೀಡಿ ಮಜೂರರ ಸಭೆ ಜರುಗಿತು.

ಮುಖ್ಯ ಅತಿಥಿಯಾಗಿ ಕಾಂ. ಪಿ. ರಾಮಚಂದ್ರರಾವ್ ಆಗಮಿಸಿದ್ದರು. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಜನಾರ್ಧನ ನಾಯಕ್‌ರು ಸಭೆಯನ್ನುದ್ದೇಶಿಸಿ ಮಾತನಾಡಿ ಜನವರಿ 19ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಜನಾರ್ಧನ ಅಧಪ ವಹಿಸಿದ್ದರು.

ಆರಂಭದಲ್ಲಿ ಕಾಂ. ಸಂಜೀವ ಬಂಗೇರ ಸ್ವಾಗತಿಸಿದರು. ಕೊನೆಯಲ್ಲಿ ಬಿ. ಎಚ್. ಬಂಗೇರ ವಂದಿಸಿದರು.

ಕಾಂ. ಜ್ಯೋತಿರ್ಮಯಿ ಬಸು ನಿಧನ

(1ನೇ ಪುಟದಿಂದ)

ಕೈಗಾರಿಕೆಗಳ ಪರಿಶೀಲನಾ ಸಮಿತಿ ಅಧ್ಯಕ್ಷರಾಗಿ ಆಡಳಿತದ ಲೋಪದೋಷಗಳನ್ನು ಬಯಲಿಗೆಳೆದ ಅತ್ಯಂತ ಸಮರ್ಥ ಸಂಸದೀಯ ಪಟು ಕಾಂ. ಜ್ಯೋತಿರ್ಮಯಿ ಬಸು.

ಮಾರುತಿ ಹಗರಣ, ಪಾಂಚೂ ಸಮಿತಿಯ ವರದಿಯ ಕುರಿತು ಹಗರಣದಲ್ಲಿ, ಪಾಂಡಿಚೇರಿ ಸ್ಪಿರಿಟ್ ಹಗರಣಗಳಲ್ಲದೇ ಭ್ರಷ್ಟಾಚಾರದ ಅನೇಕ ಘಟನೆಗಳನ್ನು ಕಾಂ. ಜ್ಯೋತಿರ್ಮಯಿ ಬಸು ಬಯಲಿಗೆಳೆದಿದ್ದರು.

ಎರಡು ಅವಧಿಗೆ ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಪರಿಶೀಲನಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಕಾಂ. ಜ್ಯೋತಿರ್ಮಯಿ ಬಸು ವಿರೋಧಿಗಳಿಂದಲೂ ಮೆಚ್ಚುಗೆ ಗಳಿಸಿದ್ದರು.

1920ರ ಡಿಸೆಂಬರ್ 18ರಂದು ಕಲಕತ್ತೆಯಲ್ಲಿ ಜನಿಸಿದ್ದ ಅವರು ದ್ವಿತೀಯ ಮಹಾಯುದ್ಧದಲ್ಲಿ ಸೈನ್ಯಾಧಿಕಾರಿಯಾಗಿದ್ದರು. ನಂತರ 1952-54ರಲ್ಲಿ ಲಂಡನ್ನಿನಲ್ಲಿ ರಾಯಲ್ ಆರ್ಟಿಲರಿಯಲ್ಲಿ ಸೈನ್ಯಾಧಿಕಾರಿಯಾಗಿದ್ದರು. ಅವರು ಲಂಡನ್ನಿನಲ್ಲಿದ್ದಾಗ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಸಂಪರ್ಕವಾಗಿದ್ದು ಭಾರತಕ್ಕೆ ಹಿಂತಿರುಗಿದ ಮೇಲೆ ಕಮ್ಯುನಿಸ್ಟ್ ಪಕ್ಷದಲ್ಲಿ ಸಕ್ರಿಯರಾದರು. 1964ರಲ್ಲಿ ಪಕ್ಷ ಇಬ್ಭಾಗವಾದಾಗ ಕಾಂ. ಜ್ಯೋತಿರ್ಮಯಿ ಬಸು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ್ದರು.

ಪ. ಬಂಗಾಲದ ಡೈಮಂಡ್ ಹಾರ್ಬರ್ ಕ್ಷೇತ್ರದಿಂದ ಕಾಂ. ಬಸು ಲೋಕಸಭೆಗೆ ಆಯ್ಕೆಯಾಗಿದ್ದರು.

ಕಾರ್ಮಿಕವರ್ಗದ ಅಪ್ರತಿಮ ನಾಯಕರಾಗಿದ್ದು ತಮ್ಮ ಹದಿನೈದು ವರ್ಷಗಳ ಸಂಸತ್ ಸದಸ್ಯತ್ವ ಅವಧಿಯಲ್ಲಿ ಕಾರ್ಮಿಕರು ಮತ್ತು ಶ್ರೀಸಾಮಾನ್ಯನಿಗಾಗಿ ಹೋರಾಟ ನಡೆಸಿದ್ದ ಕಾಂ. ಬಸು ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ತೀವ್ರ ದುಃಖ ವ್ಯಕ್ತಪಡಿಸಿದೆ.

ನಿರಂಕುಶಾಧಿಕಾರದ ವಿರುದ್ಧ ಹೋರಾಟ ಹಾಗೂ ಆಡಳಿತ ಪಕ್ಷ ಮತ್ತು ಅದರ ನಾಯಕರ ಭ್ರಷ್ಟಾಚಾರದ ದುರಾಡಳಿತಗಳನ್ನು ಬಯಲಿಗೆಳೆಯಲು ಕಾಂ. ಬಸು ನಿರಂತರ ಹೋರಾಟ ನಡೆಸಿದ್ದರು ಎಂದು ಪಿ. ಬಿ. ತಿಳಿಸಿದೆ.

ದೀನದಲಿತರ ಅಭಿವೃದ್ಧಿಗೋಸ್ಕರ ನಿರಂತರ ಶ್ರಮಿಸಿದ ಕಾಂ. ಜ್ಯೋತಿರ್ಮಯಿ ಬಸುರ ನಿಧನ ಪಕ್ಷಕ್ಕೆ ತುಂಬಲಾರದ ನಷ್ಟ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಎನ್. ಎಲ್. ದುಃಖ ವ್ಯಕ್ತಪಡಿಸಿದ್ದಾರೆ.

ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧರಾಗಿ

(1ನೇ ಪುಟದಿಂದ)

ನೇತೃತ್ವದಲ್ಲಿರುವ ವಿದ್ಯಾರ್ಥಿ ಯುವಜನ ಸಂಘಟನೆಗಳನ್ನು ಹೊರತುಪಡಿಸಿ ಉಳಿದೆಲ್ಲ ವಿದ್ಯಾರ್ಥಿ-ಯುವಜನ ಸಂಘಟನೆಗಳು ಈ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲವ್ಯಕ್ತಪಡಿಸಿವೆ. ಡಿಸೆಂಬರ್ 18ರಂದು ಬೆಂಗಳೂರಿನಲ್ಲಿ ನಡೆದ ಅಖಿಲಭಾರತ ರಾಜ್ಯ ಸರಕಾರೀ ನೌಕರರ ಫೆಡರೇಷನ್ ಮುಷ್ಕರಕ್ಕೆ ಬೆಂಬಲವ್ಯಕ್ತಪಡಿಸಿದೆ. ಮುಷ್ಕರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ತನ್ನ 50 ಲಕ್ಷ ಸದಸ್ಯರಿಗೆ ಮನವಿಮಾಡಿದೆ.

ಈ ಭಾರೀ ಪ್ರಮಾಣದ ಸಿದ್ಧತೆ ಸರಕಾರಕ್ಕೆ ನಡುಕ ಹುಟ್ಟಿಸಿದೆ. ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ ನಾಯಕರನ್ನು ಕೇಂದ್ರ ಕಾರ್ಮಿಕ ಮಂತ್ರಿಯವರು ಆಹ್ವಾನಿಸಿ ಮುಷ್ಕರದ ಕರೆಯನ್ನು ವಾಪಸ್ ತೆಗೆದುಕೊಳ್ಳುವಂತೆ ಮನವಿ ಮಾಡಿದ್ದರು. ಕಾರ್ಮಿಕ ವರ್ಗಕ್ಕೆ ಕುಠಾರಪ್ರಾಯವಾಗಿರುವ ಅಗತ್ಯ ಸೇವಾ ನಿರ್ವಹಣಾ ಕಾಯ್ದೆಯಂತಹ ಕರಾಳ ಶಾಸನಗಳನ್ನು ಸರಕಾರ ವಾಪಸ್ ಪಡೆಯುವವರೆಗೆ ಮುಷ್ಕರ ಹಿಂತೆಗೆದುಕೊಳ್ಳುವುದು ಸಾಧ್ಯವೇ ಇಲ್ಲವೆಂದು ಕಾರ್ಮಿಕ ನಾಯಕರು ಸ್ಪಷ್ಟಪಡಿಸಿದ್ದಾರೆ.

ಬಂದೂಕು ದೊಣ್ಣೆಗಳಿಂದ ಹೆದರಿಸಿ ಮುಷ್ಕರ ತಡೆಯುವ ಕನಸು ಕಾಣುತ್ತಿರುವ ಶ್ರೀಮತಿ ಇಂದಿರಾರ ಕನಸನ್ನು ನುಚ್ಚುನೂರು ಮಾಡಲು ಕಾರ್ಮಿಕ ಸನ್ನದ್ಧರಾಗುವುದು ಅತ್ಯಂತ ಹೆಚ್ಚಿನ ಅಗತ್ಯವಾಗಿದೆ. ಪದೇಪದೇ ಬಣ್ಣದ ಮಾತುಗಳಿಂದ ಜನತೆಯನ್ನು ಮೋಸಮಾಡುತ್ತ ಬಂದಿರುವ ಪ್ರಧಾನಿ ಮತ್ತವರ ಚಮಚಾ ಕೂಟಕ್ಕೆ, ಮುಷ್ಕರ ಯಶಸ್ವಿ ಮಾಡುವ ಮೂಲಕ ಕಾರ್ಮಿಕವರ್ಗ ಆಳುವವರ್ಗದ ಸವಾಲನ್ನೆದುರಿಸಬೇಕು.

ಕಾರ್ಯಕಾರಿ ಸಮಿತಿ ಸಭೆ

30-12-81ರಂದು ಸಕಲೇಶಪುರದಲ್ಲಿ ತೋಟಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿಯ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ. ಸಿ. ನಂಜುಂಡಪ್ಪ ವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ವಿ. ಸುಕುಮಾರ ಚಟುವಟಿಕೆಗಳ ಕುರಿತಾದ ವರದಿ ಸಲ್ಲಿಸಿದರು.

ಜನವರಿ 19ರಂದು ನಡೆಯಲಿರುವ ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲವ್ಯಕ್ತಪಡಿಸಿ, ಮುಷ್ಕರವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ಕಳೆದ 50 ದಿನಗಳಿಂದ ಹೊಳೆನರಸೀಪುರದ ದಲಿತರು ಜಿಲ್ಲಾ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಲಾಯಿತು.

ಕರ್ನಾಟಕದ ವಿದ್ಯುಚ್ಛಕ್ತಿ ಮಂಡಳಿಯ ನೌಕರರು ಜನವರಿ 18ರಂದು ನಡೆಸಲುದ್ದೇಶಿಸಿರುವ ಹೋರಾಟಕ್ಕೆ, ಹಾಸನ ವಿದ್ಯಾಧಿಕಾರಿಗಳ ಕಚೇರಿಯ ಮುಂದೆ ಧರಣಿ ನಡೆಸುತ್ತಿರುವ ಹಂಗಾಮಿ ಶಿಕ್ಷಕರ ಚಳುವಳಿಗೆ ಬೆಂಬಲವೀಯುವ ನಿರ್ಣಯಗಳನ್ನು ಸಭೆ ಕೈಗೊಂಡಿತು.

ತೋಟಕಾರ್ಮಿಕರಿಗೆ ಕನಿಷ್ಟ ವೇತನವನ್ನು ನಿಗದಿಪಡಿಸಲು ಸರಕಾರ ತಳೆದಿರುವ ವಿಳಂಬ ಧೋರಣೆಯನ್ನು ಖಂಡಿಸಿದ ಸಭೆಯು ತೋಟಕಾರ್ಮಿಕರಿಗೆ ಮಾಸಿಕ 500 ರೂ. ವೇತನ ಮತ್ತು ತುಟ್ಟಿಭತ್ತೆಯನ್ನು ಕೂಡಲೇ ನಿಗದಿ ಮಾಡುವಂತೆ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಬೆಂಬಲಕ್ಕೆ ಮನವಿ

ಜ. 19ರಂದು ರಾಷ್ಟ್ರೀಯ ಆಂದೋಲನ ಸಮಿತಿಯ ಕರೆಗನುಗುಣವಾಗಿ ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಬೀದರ ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಘಟಕವು ಸಾರ್ವಜನಿಕರ ಬೆಂಬಲಕೋರಿದೆ.

ತಮ್ಮ ನ್ಯಾಯಬದ್ಧ ಬೇಡಿಕೆಗಳಿಗೋಸ್ಕರ ದೇಶದ ಕಾರ್ಮಿಕವರ್ಗ ನಡೆಸಲಿರುವ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ ನೀಡಬೇಕೆಂದು ಬೀದರ ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ. ಸುಂದರ್‌ರಾಜ ಮತ್ತು ಪಿ. ಡಬ್ಲ್ಯು. ಡಿ. ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷ ಕಾಂ. ಸಂಗ್ರಾಜ್ ಬೆಂಬಲ ವ್ಯಕ್ತಪಡಿಸಿ ಪ್ರತಿಕಾ ಪ್ರಕಟಣೆ ಹೊರಡಿಸಿದ್ದಾರೆ.

ಶುಭ ವಿವಾಹ

30-12-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಮಾನಪುರ (ಬೆಂಗಳೂರು) ಸ್ಥಳೀಯ ಸಮಿತಿಯ ಆಶ್ರಯದಲ್ಲಿ ಕಾಂ. ನಾರಾಯಣನ್ ಮೆನನ್‌ರ ಮಗಳು ಶಾರದ ಮತ್ತು ಕಾಂ. ಅಚ್ಯುತನ್ ಅವರ ಸೋದರ ಕಾಂ. ನಾರಾಯಣನ್‌ರವರ ವಿವಾಹವು ನಡೆಯಿತು.

ಕಿಕ್ಕಿರಿದ ಅಭಿಮಾನಿಗಳ ಸಮ್ಮುಖದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಎನ್. ಎಲ್. ಉಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ವಧೂವರರು ಹಾರವಿನಿಮಯ ಮಾಡಿಕೊಳ್ಳುವ ಮೂಲಕ ಮದುವೆ ಸರಳವಾಗಿ ನಡೆಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರು ಈ ವಿವಾಹ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ಸಮಾರಂಭದ ಕೊನೆಯಲ್ಲಿ ಕಾಂ. ಎಂ. ಎನ್. ಮೆನನ್‌ರವರು ಪಕ್ಷದ ಸ್ಥಳೀಯ ಸಮಿತಿಗೆ 101ರೂ. ಮಂತಿಗೆ ನೀಡಿದರು.

ಡಿ. ರಾಜಗೋಪಾಲ್ ನಿಧನ

ಹಿರಿಯ ಕಾರ್ಮಿಕ ನಾಯಕ, ಎಚ್. ಎಂ. ಎಸ್. ರಾಜ್ಯ ಘಟಕದ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಡಿ. ರಾಜ್‌ಗೋಪಾಲ್ ಅವರು ಜನವರಿ 2ರಂದು ನಿಧನರಾದುದಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಬೆಳೆದುಬರುತ್ತಿರುವ ಕಾರ್ಮಿಕರ ಐಕ್ಯ ಕಾರ್ಯಾಚರಣೆಗೆ ಒತ್ತಾಸೆಯಾಗಿದ್ದ ಅವರು ಕಾರ್ಮಿಕ ರಂಗದಲ್ಲಿ ಸಲ್ಲಿಸಿದ ಸೇವೆ ಪ್ರಶಂಸನೀಯ. ಕಳೆದ ವರ್ಷ ನಡೆದ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಮುಷ್ಕರ ಸಮಯದಲ್ಲಿ ಅವರು ಮಹತ್ವಪೂರ್ಣ ಪಾತ್ರ ವಹಿಸಿದ್ದರು.

ಸುಮಾರು ಎರಡು ದಶಕಗಳಿಂದ ಕಾರ್ಮಿಕ ರಂಗದಲ್ಲಿ ಅವಿಶ್ರಾಂತವಾಗಿ ಶ್ರಮಿಸಿದ್ದ ರಾಜ್‌ಗೋಪಾಲ್‌ರ ನಿಧನ ಕಾರ್ಮಿಕವರ್ಗದ ಐಕ್ಯ ಕಾರ್ಯಾಚರಣೆಗೆ ಒಂದು ದೊಡ್ಡ ನಷ್ಟ ಎಂದು ಕಾಂ. ಎನ್. ಎಲ್. ಉಪಾಧ್ಯಾಯ ಶೋಕ ವ್ಯಕ್ತಪಡಿಸಿದ್ದಾರೆ.

ಬೀಡಿ ಕಾರ್ಮಿಕರ ವಿಸ್ತೃತ ಸಭೆ

ಕುಣಿಗಲ್

ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ 4-1-82ರಂದು ಕಾಂ. ಸಲೀಮಾ ಬೇಗಂ ಅಧ್ಯಕ್ಷತೆಯಲ್ಲಿ ತಾಲ್ಲೂಕು ಬೀಡಿಕೆಲಸಗಾರರ ಸಂಘದ ವಿಸ್ತೃತ ಸಭೆ ನಡೆಯಿತು.

ಸಭೆಯನ್ನುದ್ದೇಶಿಸಿ ಕಾಂ. ಮಹಮ್ಮದ್ ದಸ್ತಗೀರ್ ಮಾತನಾಡುತ್ತಾ, ಒಂದು ವರ್ಷದಿಂದಲೂ ವೇತನ ಪರಿಷ್ಕರಿಸುವ ಆಶ್ವಾಸನೆ ಸರಕಾರ ಕೊಡುತ್ತಾ ಬಂದು ಈಗ ಸಾವಿರ ಬೀಡಿಗೆ 7 ರೂ. 40 ಪೈಸೆ ಎಂದು ಸರಕಾರ ತೀರ್ಮಾನಿಸಿರುವುದನ್ನು ಉಗ್ರವಾಗಿ ಖಂಡಿಸಿದರು.

ಸರಕಾರದ ಕಾರ್ಮಿಕ ವಿರೋಧಿ, ಜನವಿರೋಧಿ ನೀತಿಗಳನ್ನು ಪ್ರತಿಭಟಿಸಿ ಜ. 19ರಂದು ನಡೆಯಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕಾಂ. ದಸ್ತಗೀರ್ ಮನವಿ ಮಾಡಿದರು.

ಅದೇ ದಿನ ಕುಣಿಗಲ್‌ನಲ್ಲಿ ತಾಲ್ಲೂಕಿನ 4ನೇ ದರ್ಜೆ ಸರಕಾರಿ ನೌಕರರು ತಮ್ಮ ಬೇಡಿಕೆಗಳಿಗೋಸ್ಕರ ಮೆರವಣಿಗೆ-ಸಭೆ ಏರ್ಪಡಿಸಿದ್ದರು. ಸರಕಾರಿ ನೌಕರರ ಮೆರವಣಿಗೆಯನ್ನು ಬೀಡಿಕಾರ್ಮಿಕರು ಸ್ವಾಗತಿಸಿ ತಮ್ಮ ಬೆಂಬಲವ್ಯಕ್ತಪಡಿಸಿದರು.

ವಾಮುಂಜೂರು

ದ. ಕ. ಜಿಲ್ಲೆಯ ಗುರುಪುರ-ಸುರತ್ಕಲ್ ಬೀಡಿ ಲೇಬರ್ ಯೂನಿಯನ್ ಆಶ್ರಯದಲ್ಲಿ ವಾಮಂಜೂರು ಪ್ರದೇಶ ಬೀಡಿಕಾರ್ಯಕರ್ತರ ಸಭೆಯು 28-12-81 ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಗೋಪಾಲ್ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ. ಕೆ. ಗಂಗಯ್ಯ ಮತ್ತು ಕಾಂ. ಯು. ಬಿ. ಲೋಕಯ್ಯ ಮಾತನಾಡಿ ಕನಿಷ್ಟ ಕೂಲಿ ವಿಷಯದಲ್ಲಿ ಬೀಡಿ ಕಾರ್ಮಿಕರನ್ನು ವಂಚಿಸಿದ ಸರಕಾರದ ನೀತಿಯನ್ನು ಉಗ್ರವಾಗಿ ಖಂಡಿಸಿದರು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office: L-56, K. V. Temple Street, Sultanpet Bangalore-560 053. Phone-24154
EDITOR: M. K. BHAT